
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ರಾಜಸ್ಥಾನದ ಉದಯಪುರದಲ್ಲಿ ಗುರುವಾರ ದಾಂಪತ್ಯ ಜೀವನಕ್ಕೆ ಕಾಲಿಟ್ಟ ನಟಿ ರಶ್ಮಿಕಾ ಮಂದಣ್ಣ, ನಟ ವಿಜಯ್ ದೇವರಕೊಂಡ...

27 ಫೆಬ್ರವರಿ 2026 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 343 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸ್ಯಾಂಡಲ್‌ವುಡ್‌ನಲ್ಲೊಂದು ಸಾಮಾಜಿಕ ಕಳಕಳಿಯ ಸಿನಿಮಾ » 2


ಜವಾಬ್ದಾರಿ ಅರಿತು ನಡೆದರೆ ಉತ್ತಮ ಸಮಾಜ ನಿರ್ಮಾಣ » 3


ಕಾಡಾನೆ ಸಮಸ್ಯೆ ನಿವಾರಣೆಗೆ ಪ್ರಯತ್ನ : ಹೆಚ್.ಡಿ.ಕೆ. » 4

# ಕುರ್ಚಿ ವಿಚಾರದಲ್ಲೇ ಸಮಯ ವ್ಯರ್ಥ

## ಗ್ಯಾರಂಟಿಗಳ ಹೆಸರಿನಲ್ಲೇ ಕಾಲ ಕಳೆದ ಕಾಂಗ್ರೆಸ್ : ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರ 2 ವರ್ಷ ಗ್ಯಾರಂಟಿ ಹೆಸರಿನಲ್ಲಿ ಕಾಲ ಕಳೆದಿದೆ, ಇದೀಗ ಮುಖ್ಯಮಂತ್ರಿ ಕುರ್ಚಿ ವಿಚಾರದಲ್ಲೇ ಸಮಯ ವ್ಯರ್ಥವಾಗುತ್ತಿದೆ. ಶಾಸಕರು ಸಚಿವ ಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿದ್ದಾರೆ. ಅಭಿವೃದ್ಧಿ ಬಗ್ಗೆ ಕಿಂಚಿತ್ತೂ ಗಮನ ಇಲ್ಲವಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ವಾಗ್ದಾಳಿ ನಡೆಸಿದರು.

ಅರಕಲಗೂಡು ತಾಲ್ಲೂಕಿನ ಕೊಡಕಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಕುರ್ಚಿ ಉಳಿಸಿಕೊಳ್ಳುವ ರಾಜಕೀಯ ನಡೆಯುತ್ತಿದೆ. ರಾಜ್ಯದಲ್ಲಿ ಎದುರಾಗಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವುದು ಮುಖ್ಯ. ರಾಜಕೀಯ ನಾಟಕ ಬಿಟ್ಟು ಉಳಿದ ಅವಧಿಯಲ್ಲಾದರೂ ಅಭಿವೃದ್ಧಿಗೆ ಆದ್ಯತೆ ನೀಡಿ ಎಂದರು.

ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಜನರ ಮೇಲೆಯೇ ಸಾಲ ಹೊರಿಸಲಾಗಿದೆ. ಚುನಾವಣೆ ಗೆಲ್ಲುವ ಉದ್ದೇಶದಿಂದ ಜನರ ಹಣವನ್ನು ಬೇಕಾಬಿಟ್ಟಿಯಾಗಿ ಖರ್ಚು ಮಾಡಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಶಾಶ್ವತ ಅಭಿವೃದ್ಧಿ ಕಾಣುತ್ತಿಲ್ಲ. ಇಂತಹ ತಾತ್ಕಾಲಿಕ ಯೋಜನೆಗಳು ಹೆಚ್ಚು ದಿನ ಉಳಿಯುವುದಿಲ್ಲ. ದೇಶದ ಭವಿಷ್ಯ ಗಮನದಲ್ಲಿಟ್ಟು ಎಚ್ಚರಿಕೆಯಿಂದ ತೀರ್ಮಾನ ಕೈಗೊಳ್ಳಬೇಕೆಂದು ಜನರಿಗೆ ಕರೆ ನೀಡಿದರು.

ರಾಜ್ಯ ಸರ್ಕಾರ ಗ್ಯಾರಂಟಿ ಜಾರಿಯಿಂದ ನಾಡು ಸುಭಿಕ್ಷವಾಗಿದ್ದು, ಕುಟುಂಬಗಳು ಉತ್ತಮ ಜೀವನ ನಡೆಸುತ್ತಿವೆ ಎಂದು ಹೇಳುತ್ತಿದೆ. ಆದರೆ, ವಾಸ್ತವ ಪರಿಸ್ಥಿತಿ ಭಿನ್ನವಾಗಿದೆ. ಭಾರತ ಆರ್ಥಿಕವಾಗಿ ವಿಶ್ವದಲ್ಲಿ ಮೂರನೇ ಸ್ಥಾನಕ್ಕೇರಲು ದಾಪುಗಾಲಿಡುತ್ತಿದೆ. ಆದರೆ, ರಾಜ್ಯದಲ್ಲಿ ಉದ್ಯೋಗ ಸಮಸ್ಯೆ ಗಂಭೀರವಾಗಿದೆ. ಸರ್ಕಾರ 76 ಸಾವಿರ ಶಿಕ್ಷಕರ ನೇಮಕಾತಿ ಮಾಡದೇ ವಿಳಂಬ ಮಾಡುತ್ತಿದೆ. ಶಾಲೆಗಳಲ್ಲಿ ಶಿಕ್ಷಕರ ಕೊರತೆ ತೀವ್ರವಾಗಿದೆ. ಕಳೆದ 3 ವರ್ಷಗಳಿಂದ ಯಾವುದೇ ಉದ್ಯೋಗಾವಕಾಶ ಸೃಷ್ಟಿಸಿಲ್ಲ. ಯುವಕರು ನಮ್ಮ ಮನೆ ಬಾಗಿಲಿಗೆ ಬಂದಾಗ ಮನಸ್ಸಿಗೆ ನೋವಾಗುತ್ತದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲ ಬಾರಿ ಅಧಿಕಾರಕ್ಕೆ ಬಂದಾಗ 2.5 ಲಕ್ಷಕ್ಕೂ ಹೆಚ್ಚು ಹುದ್ದೆ ನೇಮಕಾತಿ ಮಾಡುವುದಾಗಿ ಹೇಳಿದ್ದರು. ಆದರೆ, ಈವರೆಗೂ ಆಗಿಲ್ಲ. ಈಗಲೂ ಅಷ್ಟೇ ಪ್ರಮಾಣದ ಸಿಬ್ಬಂದಿ ಕೊರತೆ ಮುಂದುವರಿದಿದೆ. ಒಳ ಮೀಸಲಾತಿ ಸಮಸ್ಯೆಯಿಂದ ನೇಮಕಾತಿ ವಿಳಂಬವಾಗುತ್ತಿದೆ ಎಂದು ಹೇಳಲಾಗುತ್ತಿದೆ. ಸಚಿವ ಸಂಪುಟದಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದರೂ ಸ್ಪಷ್ಟ ಕ್ರಮ ಕಾಣಿಸುತ್ತಿಲ್ಲವೆಂದು ದೂರಿದರು.

ವಿಪಕ್ಷಗಳು ಅಕ್ರಮಗಳ ಬಗ್ಗೆ ಆರೋಪ ಮಾಡಿದಾಗ ದಾಖಲಾತಿ ಕೇಳಲಾಗುತ್ತದೆ. ಬಿಜೆಪಿ ಆಡಳಿತದಲ್ಲಿ ಪೇ ಸಿಎಂ ಆರೋಪ ಕೇಳಿ ಬಂದಿತ್ತು. ನಿಮ್ಮ ಸರ್ಕಾರ ಬಂದ ಬಳಿಕ ಯಾರ ಮೇಲೆ ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದ ಅವರು, ಶೇ.40 ಕಮೀಷನ್ ಆರೋಪದ ಮೂಲಕ 136 ಸ್ಥಾನ ಗೆದ್ದಿದ್ದೀರಿ. ಕ್ರಮ ಕೈಗೊಳ್ಳುವ ಧೈರ್ಯವಿದ್ದರೆ ಯಾರು ಕಮೀಷನ್ ಪಡೆದಿದ್ದಾರೆ ಹೇಳುತ್ತೇವೆಂದು ಗುತ್ತಿಗೆದಾರರು ಹೇಳುತ್ತಿದ್ದಾರೆಂದು ತಿಳಿಸಿದರು.

ಮಾಜಿ ಸಚಿವರಾದ ಎ.ಮಂಜು, ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಇದ್ದರು.



> ಕೋರ್ಟ್ ಆದೇಶ ಹಿನ್ನಲೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಮೇ ತಿಂಗಳಲ್ಲಿ ನಡೆಯಬೇಕಿದೆ, ಅದಕ್ಕೆ ನಾವು ಸಿದ್ಧರಿದ್ದೇವೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಜೊತೆ ಮೈತ್ರಿ ಬಗ್ಗೆ ಇನ್ನೂ ಯಾವುದೇ ಮಾತುಕತೆ ಆಗಿಲ್ಲ. ಎರಡು ಪಕ್ಷಗಳೂ ಒಪ್ಪಿಕೊಂಡರೆ ಚರ್ಚೆ ಸಾಧ್ಯ. ಸಂದರ್ಭ ಬಂದಾಗ ಮಾತನಾಡುತ್ತೇವೆ.
>
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

### ಯಾರನ್ನೂ ಹಿಂದಿಕ್ಕಿ ಸಿಎಂ ಆಗಲ್ಲ

ನಾನು ಮುಖ್ಯಮಂತ್ರಿ ಆಗುವುದು ಮುಖ್ಯವಲ್ಲ, ಜನರ ಬದುಕು ಸರಿಪಡಿಸಬೇಕು. ಈ ಕೆಟ್ಟ ಸರ್ಕಾರ ಹೋಗಬೇಕೆಂಬುದು ನನ್ನ ಆದ್ಯತೆ. 2028ಕ್ಕೆ ಮುಖ್ಯಮಂತ್ರಿ ಆಗಬೇಕೆಂದು ಹಲವರು ಕ್ಯೂನಲ್ಲಿದ್ದಾರೆ. ನಾವು ಯಾರನ್ನೂ ಹಿಂದಿಕ್ಕಿ ಸಿಎಂ ಆಗಬೇಕೆಂದಿಲ್ಲ. ನಮ್ಮ ಕರ್ತವ್ಯ ಮಾಡಬೇಕು, ಫಲಾಫಲ ದೇವರಿಗೆ ಬಿಡಬೇಕೆಂದು ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣಕ್ಕೆ ಮುರಳುವ ಕುರಿತು ಪ್ರತಿಕ್ರಿಯಿಸಿದರು.

## ತಂಬಾಕು ಬೆಲೆ ಹೆಚ್ಚಿಸಲು ಸಚಿವರೊಂದಿಗೆ ಚರ್ಚೆ : ಹೆಚ್.ಡಿ.ಕೆ.ಭರವಸೆ



• ಪ್ರಜೋದಯ ವರದಿ

**ಅರಕಲಗೂಡು:** ರಾಮನಾಥಪುರ, ಹುಣಸೂರು, ಪಿರಿಯಾಪಟ್ಟಣ ತಾಲ್ಲೂಕಿನ ವಾಣಿಜ್ಯ ಬೆಳೆಯಾಗಿ ತಂಬಾಕನ್ನು ರೈತರು ಅವಲಂಬಿಸಿಕೊಂಡಿದ್ದಾರೆ. ಇತ್ತೀಚೆಗೆ ಬೆಲೆ ಇಳಿಕೆಯಿಂದ ಆಗಿರುವ ಸಮಸ್ಯೆ ನಿವಾರಣೆಗೆ ಪರಿಹಾರ ಕಲ್ಪಿಸುವುದಾಗಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಭರವಸೆ ನೀಡಿದರು.

ತಾಲ್ಲೂಕಿನ ಕೊಡಕಹಳ್ಳಿ ಗ್ರಾಮದಲ್ಲಿ ಗುರುವಾರ ತಂಬಾಕು ಬೆಳೆಗಾರರಿಂದ ಮನವಿ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ಕಳೆದ ಬಾರಿ ತಂಬಾಕು ಬೆಲೆ ಕುಸಿತಗೊಂಡಿರುವ ಬಗ್ಗೆ ಮಾಜಿ ಸಚಿವರಾದ ಎ.ಮಂಜು ಹಾಗು ಸಾ.ರಾ.ಮಹೇಶ್ ಸೇರಿ ಇತರರು ನನ್ನ ಗಮನಕ್ಕೆ ತಂದ ಹಿನ್ನಲೆಯಲ್ಲಿ ವಾಣಿಜ್ಯ ಸಚಿವರಾದ ಪಿಯೂಷ್ ಗೋಯಲ್ ಅವರೊಂದಿಗೆ ಚರ್ಚಿಸಿ ಉತ್ತಮ ಬೆಲೆ ಕಲ್ಪಿಸಿಕೊಡಲಾಗಿತ್ತು ಎಂದು ಹೇಳಿದರು.

ಬಜೆಟ್ ಮುನ್ನ ದೊರೆಯುತ್ತಿದ್ದ ಉತ್ತಮ ಬೆಲೆ, ಬಜೆಟ್ ನಂತರ 260 ರಿಂದ 280ರೂ.ಗೆ ಕುಸಿತ ಕಂಡಿರುವ ಬಗ್ಗೆ ಈ ಭಾಗದ ರೈತರು ಮನವಿ ಸಲ್ಲಿಸಿದ್ದಾರೆ. ಶಾಸಕರು ಕೂಡ ಈ ಕುರಿತು ಚರ್ಚಿಸಿದ್ದಾರೆ. ಹೊಗೆಸೊಪ್ಪಿನ ಉತ್ಪನ್ನಗಳ ಮೇಲೆ ಜಿಎಸ್‌ಟಿ ತೆರಿಗೆಯನ್ನು ಕೈಬಿಟ್ಟಿದ್ದರೂ ಕೂಡ ಬೆಲೆ ಇಳಿಕೆ ಆಗಿರುವುದು ಸಲ್ಲದ ವಿಚಾರ. ವಾಣಿಜ್ಯ ಸಚಿವರು ವಿದೇಶಿ ವಾಣಿಜ್ಯ ಪ್ರತಿನಿಧಿಗಳೊಂದಿಗೆ ಒಪ್ಪಂದಗಳ ಕುರಿತು ನಿರತರಾಗಿದ್ದಾರೆ. ಕೆಲವೇ ದಿನಗಳಲ್ಲಿ ಅವರೊಂದಿಗೆ ಸಮಾ


» ನಾಲ್ಕನೇ ಪುಟದಲ್ಲಿ

## 66 ಪೈಸೆ ಕೊಡದಿದ್ದಕ್ಕೆ ಕೆನರಾ ಬ್ಯಾಂಕ್ ವಿರುದ್ಧ ಆಕ್ರೋಶ

• ಪ್ರಜೋದಯ ವರದಿ

**ಸಕಲೇಶಪುರ:** ಕೇವಲ 9 ರೂಪಾಯಿ 34 ಪೈಸೆ ಬಾಕಿ ಹಣ ಪಾವತಿಸುವಂತೆ ಬ್ಯಾಂಕ್‌ನಿಂದ ಮೊಬೈಲ್ ಸಂದೇಶ ಬಂದಿದ್ದಕ್ಕೆ ವ್ಯಕ್ತಿಯೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದು, 10 ರೂ. ಪಾವತಿಸಿ ಉಳಿದ 66 ಪೈಸೆ ಕೊಡುವಂತೆ ಒತ್ತಾಯಿಸಿದ ಘಟನೆ ಪಟ್ಟಣದಲ್ಲಿ ನಡೆದಿದೆ.

ನಗರಾಭಿವೃದ್ಧಿ ಪ್ರಾಧಿಕಾರ ಸದಸ್ಯ, ವಕೀಲರೂ ಆಗಿರುವ ಚರಣ್ ಎಂಬುವವರಿಗೆ ಕೆನರಾ ಬ್ಯಾಂಕ್‌ನಿಂದ ಬಾಕಿ ಸಾಲ ಪಾವತಿಸುವಂತೆ ಕರೆ ಬಂದಿದೆ. ಇದೇ ಬ್ಯಾಂಕ್‌ನಲ್ಲಿ ವ್ಯವಹಾರ ಹೊಂದಿರುವ ಚರಣ್ ಅವರು 50 ಸಾವಿರ ರೂ. ಲೋನ್ ಪಡೆದಿದ್ದರು. ಸಮಯಕ್ಕೆ ಸರಿಯಾಗಿ ಲೋನ್ ಹಣ ಪಾವತಿಸಿದ್ದರಾದರೂ ಇನ್ನೂ 9 ರೂಪಾಯಿ 34 ಪೈಸೆ ಬಾಕಿ ಪಾವತಿಸುವಂತೆ ಬ್ಯಾಂಕ್‌ನಿಂದ ಫೋನ್ ಕರೆ ಹಾಗು ಸಂದೇಶ ಬಂದಿತ್ತು. ಈ ಹಿನ್ನಲೆಯಲ್ಲಿ ಬ್ಯಾಂಕ್‌ಗೆ ಬಂದ ಅವರು 10 ರೂ. ಪಾವತಿಸಿ ಉಳಿದ 66 ಪೈಸೆ ವಾಪಾಸ್ ಕೊಡುವಂತೆ ಸಿಬ್ಬಂದಿಗೆ ಕೋರಿದ್ದಾರೆ. ಪೈಸೆ ಲೆಕ್ಕದಲ್ಲಿ ವಾಪಾಸ್ ಕೊಡಲು ಸಾಧ್ಯವಿಲ್ಲವೆಂದಾಗ ಆಕ್ರೋಶ ವ್ಯಕ್ತಪಡಿಸಿದ ಅವರು, ಕೇವಲ ಒಂಬತ್ತು ರೂ.ಗಾಗಿ ಕರೆ ಮಾಡಿರುವ ನೀವು ನನ್ನ 66 ಪೈಸೆ ಲೆಕ್ಕದ ಹಣ ಏಕೆ ಕೊಡುವುದಿಲ್ಲವೆಂದು ಖಾರವಾಗಿ ಪ್ರಶ್ನಿಸಿದ್ದಾರೆ. ತಮ್ಮ ಉಳಿಕೆ ಹಣಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರುವ ಎಚ್ಚರಿಕೆಯನ್ನೂ ನೀಡಿದ್ದಾರೆ. ಕೋಟ್ಯಾಂತರ ರೂ. ವಂಚಿಸಿ ವಿದೇಶಗಳಲ್ಲಿ ಆರಾಮಾಗಿರುವ ಉದ್ಯಮಿಗಳಿಗೆ ಏನೂ ಮಾಡಲಾಗದೆ ಬ್ಯಾಂಕ್‌ನವರು ನಮ್ಮಂತವರ ಮೇಲೆ ಗದಾ ಪ್ರಹಾರ ನಡೆಸುತ್ತಾರೆಂದು ಆಕ್ರೋಶ ವ್ಯಕ್ತಪಡಿಸಿದರು.


Canara Bank
Date 27/02/2026
Amount 9.34
Canara Bank Toll Free No. 1800 1030

# ಜಿಲ್ಲೆಯ ಏಳು ಕ್ಷೇತ್ರಗಳಲ್ಲೂ ಜೆಡಿಎಸ್ ಗೆಲ್ಲಿಸಿ ಬಲಪಡಿಸಿ

## ಜಿಲ್ಲೆಯ ಮತ್ತಷ್ಟು ಅಭಿವೃದ್ಧಿಗೆ ಅವಕಾಶ ನೀಡಿ: ಕುಮಾರಸ್ವಾಮಿ ಮನವಿ

• ಪ್ರಜೋದಯ ವರದಿ

**ಅರಕಲಗೂಡು:** ಜಿಲ್ಲೆಗೆ ದೇವೇಗೌಡರಾದಿಯಾಗಿ ನಾನು, ಹೆಚ್.ಡಿ. ರೇವಣ್ಣ ಅನೇಕ ಕಾರ್ಯಕ್ರಮಗಳನ್ನು ನೀಡುವ ಮೂಲಕ ಅಭಿವೃದ್ಧಿ ಪಡಿಸಿದ್ದೇವೆ. ಮುಂದೆಯೂ ಈ ಕೆಲಸ ಮತ್ತಷ್ಟು ವ್ಯಾಪಿಸುವ ಸಲುವಾಗಿ ಜಿಲ್ಲೆಯ ಏಳು ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿ, ನಮ್ಮನ್ನು ಬಲಪಡಿಸಬೇಕೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮನವಿ ಮಾಡಿದರು.

ತಾಲ್ಲೂಕಿನ ಕೊಡಕಹಳ್ಳಿ ಗ್ರಾಮದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶ್ರೀಲಕ್ಷ್ಮೀದೇವಿ, ಮಾರಮ್ಮ ದೇವಿ, ಗ್ರಾಮದೇವತೆ ಪ್ರತಿಷ್ಠಾಪನೆ ಹಾಗು ದೇವಸ್ಥಾನಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ನಾನು ಐದನೇ ಬಾರಿ ಬದುಕಿ ಬಂದಿದ್ದೇನೆ. ದೇವರ ಆಶೀರ್ವಾದ, ಜನರ ಪ್ರೀತಿ ವಿಶ್ವಾಸದಿಂದ ಇಂದು ನಿಮ್ಮ ಮುಂದೆ ನಿಂತಿದ್ದೇನೆ. ದೇವೇಗೌಡರು 5 ವರ್ಷಗಳ ಪೂರ್ಣಾವಧಿ ಅಧಿಕಾರ ನಡೆಸಿದ್ದರೆ ರಾಜ್ಯದ ಪರಿಸ್ಥಿತಿಯೇ ಬೇರೆ ಇರುತ್ತಿತ್ತು. ನನಗೂ ಕೂಡ ಹೆಚ್ಚಿನ ಅವಕಾಶ ಸಿಕ್ಕಿಲ್ಲ ಎಂದರು.

ನನ್ನ ಆರೋಗ್ಯ ಸಮಸ್ಯೆ ಏನೇ ಇದ್ದರೂ ದೇವರು ಕಾಪಾಡುತ್ತಾನೆಂದು ನಂಬಿ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೇನೆ. ಮುಂದಿನ ದಿನಗಳಲ್ಲಿ ದೇವೇಗೌಡರ ಹೆಸರು ಉಳಿಸುವ ಕೆಲಸಗಳನ್ನು ಮಾಡಲು ಅವಕಾಶ ನೀಡುತ್ತೀರಿ ಎಂಬ ಭಾವನೆ ಯಿಂದ ಶ್ರಮ ಹಾಕುತ್ತಿದ್ದೇನೆ. ಎ.ಮಂಜು ಅವರು ಕೊನೆಯ ಸಮಯದಲ್ಲಿ ಪಕ್ಷಕ್ಕೆ ಬಂದರೂ ಅವರ ಕೈ ಹಿಡಿದಿದ್ದೀರಿ. ಮುಂದೆಯೂ ಅವರ ಕೈ ಹಿಡಿಯುವಂತೆ ಕೋರಿದರು.

**ಭಾರತ ವಿಶ್ವಕ್ಕೆ ಸರಿಸಾಟಿ**

ದೇಶ ದೊಡ್ಡಮಟ್ಟದಲ್ಲಿ ಬೆಳೆಯುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ನಾನು ಎರಡು ಇಲಾಖೆ ಮಂತ್ರಿಯಾಗಿದ್ದೇನೆ. ದೇಶ ವಿಶ್ವಕ್ಕೆ ಸರಿಸಾಟಿಯಾಗಿ ಹೋಗುತ್ತಿದೆ. ಆಟೋಮೊಬೈಲ್ ಇಂಡಸ್ಟ್ರಿಗೆ ಆದ್ಯತೆ ನೀಡಿದ್ದೇವೆ. ಜನರು ಕೆಟ್ಟ ಹೊಗೆ ಕುಡಿಯಬಾರದೆಂದು ಎಲೆಕ್ಟ್ರಿಕ್ ಬೈಕ್, ಕಾರು

» ನಾಲ್ಕನೇ ಪುಟದಲ್ಲಿ



# ಹಳೇಬೀಡು ಪೊಲೀಸರಿಂದ 18 ಜೀತ ಕಾರ್ಮಿಕರ ರಕ್ಷಣೆ


• ಪ್ರಜೋದಯ ವರದಿ

**ಹಾಸನ:** ಅಮಾಯಕರ ಬಡತನ ಹಾಗು ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡು ಅಮಾನವೀಯವಾಗಿ ದುಡಿಸಿಕೊಳ್ಳುತ್ತಿದ್ದ ಪ್ರಕರಣವನ್ನು ಹಳೇಬೀಡು ಠಾಣೆ ಪೊಲೀಸರು ಭೇದಿಸಿದ್ದು, 18 ಜನರನ್ನು ರಕ್ಷಿಸಿದ್ದಾರೆ.

ಬೇಲೂರು ತಾಲ್ಲೂಕು ಚಟ್ನಹಳ್ಳಿಯ ಶೆಡ್‌ವೊಂದರಲ್ಲಿ ಕೂಲಿ ಕಾರ್ಮಿಕರನ್ನು ಕೂಡಿ ಹಾಕಲಾಗಿತ್ತು. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದಾಗ ಸತ್ಯ ಬೆಳಕಿಗೆ ಬಂದಿದೆ. ಪ್ರಕರಣ ಸಂಬಂಧ ಮುನಿಯನ ಕೊಪ್ಪಲು ಗ್ರಾಮದ ನಾಗರಾಜ್ ಹಾಗು ಮುನೇಶ್ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬಡತನ, ಸಾಲಬಾಧೆ ಹಾಗು ವಿವಿಧ ಕಾರಣಗಳಿಂದ ತೊಂದರೆಗೆ ಸಿಲುಕಿದವರನ್ನೇ ಗುರಿಯಾಗಿಸಿಕೊಂಡಿದ್ದ ಆರೋಪಿಗಳು ಬಸ್, ರೈಲ್ವೆ ನಿಲ್ದಾಣಗಳಲ್ಲಿ ಗೊತ್ತು ಗುರಿ ಇಲ್ಲದೆ ನಿಂತವರನ್ನು ಕರೆತರುತ್ತಿದ್ದರು. ಚಟ್ನಹಳ್ಳಿಯ ಶೆಡ್‌ನಲ್ಲಿ ಕೂಡಿ ಹಾಕಿ ಜಮೀನುಗಳಲ್ಲಿ ಕೂಲಿ ಕೆಲಸಕ್ಕೆ ಕಳುಹಿಸುತ್ತಿದ್ದರು. ಜೀತ ಕಾರ್ಮಿಕರ ಮೇಲ್ವಿಚಾರಣೆಯನ್ನು ಇವರೇ ನೋಡಿಕೊಳ್ಳುತ್ತಿದ್ದರಿಂದ ಭೂ ಮಾಲೀಕರು ಸಹ ಪೂರ್ವಾಪರ ವಿಚಾರಿಸುವ ಔದಾರ್ಯ ತೋರಿರಲಿಲ್ಲ. ಅವರಿಗೆ ಮೊಬೈಲ್ ಇಲ್ಲದೆ, ಸಾರ್ವಜನಿಕರ ಸಂಪರ್ಕವೂ ಇಲ್ಲದ್ದರಿಂದ ಹಲವು ತಿಂಗಳಿಂದ ಜೀತದಾಳುಗಳಾಗಿ ಚಿತ್ರಹಿಂಸೆ ಅನುಭವಿಸುತ್ತಿದ್ದರು ಎನ್ನಲಾಗಿದೆ.

» ನಾಲ್ಕನೇ ಪುಟದಲ್ಲಿ



### ಜಿಲ್ಲಾಧಿಕಾರಿಗೆ ಕರೆ ಮಾಡಿದ್ದ ಗ್ರಾಮಸ್ಥರು

ಶೆಡ್‌ವೊಂದರಲ್ಲಿ ಅಕ್ರಮವಾಗಿ ಕಾರ್ಮಿಕರನ್ನು ಬಂಧಿಸಿರುವ ವಿಚಾರವನ್ನು ಚಟ್ನಹಳ್ಳಿ ಗ್ರಾಮಸ್ಥರು ಬುಧವಾರ ರಾತ್ರಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರಿಗೆ ಕರೆ ಮಾಡಿ ತಿಳಿಸಿದ್ದರು. ಜಿಲ್ಲಾಧಿಕಾರಿಯವರು ತಕ್ಷಣ ಬೇಲೂರು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರಿಗೆ ಹೇಳಿದ್ದಾರೆ. ರಾತ್ರಿಯೇ ಪೊಲೀಸರೊಂದಿಗೆ ಸ್ಥಳಕ್ಕೆ ದೌಡಾಯಿಸಿದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಪಿ.ಲಿಂಗರಾಜು ಕಾರ್ಮಿಕರು ಇರುವುದನ್ನು ಖಚಿತ ಮಾಡಿಕೊಂಡಿದ್ದಾರೆ. ಸದ್ಯ ಎಲ್ಲರಿಗೂ ಹಗರೆ ಗ್ರಾಮದ ಸರ್ಕಾರಿ ವಸತಿ ನಿಲಯದಲ್ಲಿ ವಾಸ್ತವ್ಯದ ವ್ಯವಸ್ಥೆ ಮಾಡಲಾಗಿದೆ.

## 226 ಹುದ್ದೆ ಸೃಜಿಸಿ ರಾಜ್ಯ ಸರ್ಕಾರ ಆದೇಶ

• ಪ್ರಜೋದಯ ವರದಿ

**ಬೆಂಗಳೂರು:** ಹೈಕೋರ್ಟ್‌ನ ಬೆಂಗಳೂರಿನ ಪ್ರಧಾನ ಹಾಗು ಕಲಬುರಗಿ-ಧಾರವಾಡ ಪೀಠಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ತ್ವರಿತ ವಿಲೇವಾರಿಗೆ ಅನುವಾಗುವಂತೆ 226 ಹುದ್ದೆಗಳನ್ನು ಸೃಜಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಬೆಂಗಳೂರಿನ ಪ್ರಧಾನ ಪೀಠಕ್ಕೆ 68, ಧಾರವಾಡಕ್ಕೆ 97 ಮತ್ತು ಕಲಬುರಗಿ ಪೀಠಕ್ಕೆ 61 ಹುದ್ದೆಗಳನ್ನು ಸೃಷ್ಟಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ. ಹೈಕೋರ್ಟ್‌ನ ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿ ಹೆಚ್ಚಿನ ಪ್ರಕರಣಗಳು ಬಾಕಿ ಇವೆ. ಪ್ರತಿ ವರ್ಷ ಹೊಸದಾಗಿ ದಾಖಲಾಗುವ ಪ್ರಕರಣಗಳೂ ಹೆಚ್ಚುತ್ತಿವೆ.

# ಆಲೂಗೆಡ್ಡೆಗೆ ಬೆಂಬಲ ಬೆಲೆ, ವಿಮಾ ಸೌಲಭ್ಯ ಕಲ್ಪಿಸಿ

## ರೈತರು-ವರ್ತಕರೊಂದಿಗೆ ಚರ್ಚಾಗೋಷ್ಠಿಯಲ್ಲಿ ಬೆಳೆಗಾರರ ಒಕ್ಕೊರಲ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಆಲೂಗೆಡ್ಡೆ ಬಿತ್ತನೆ ಬೀಜ ವಿತರಣೆ ವೇಳೆಯೇ ವಿಮಾ ಸೌಲಭ್ಯ, ಔಷಧಿಗಳಿಗೆ ಸಬ್ಸಿಡಿ, ಬೆಂಬಲ ಬೆಲೆ ಘೋಷಣೆ ಮಾಡುವ ಮೂಲಕ ರೈತರನ್ನು ಪ್ರೋತ್ಸಾಹಿಸುವ ಕೆಲಸ ವಾಗಬೇಕೆಂದು ಆಲೂಗೆಡ್ಡೆ ಬೆಳೆಗಾರರು ಒಕ್ಕೊರಲಿನಿಂದ ಒತ್ತಾಯಿಸಿದರು.

ನಗರದ ಗಾಂಧಿ ಭವನದಲ್ಲಿ ತೋಟಗಾರಿಕೆ ಇಲಾಖೆಯಿಂದ ಗುರುವಾರ ಹಮ್ಮಿಕೊಂಡಿದ್ದ ಮುಂಗಾರು ಹಂಗಾಮಿನ ಆಲೂಗೆಡ್ಡೆ ಬೆಳೆಗೆ ಸಂಬಂಧಿಸಿದಂತೆ ರೈತರು-ವರ್ತಕರೊಂದಿಗೆ ನಡೆದ ಚರ್ಚಾ ಗೋಷ್ಠಿಯಲ್ಲಿ ಹಲವು ರೈತರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ಸರ್ಕಾರ, ತೋಟಗಾರಿಕೆ ಇಲಾಖೆ ರೈತರ ಪರವಾಗಿ ನಿಲುವು ತಾಳುವಂತೆ ಆಗ್ರಹಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಮಾತನಾಡಿ, ಹಿಂದೆ ಹಾಸನ ಜಿಲ್ಲೆ ಎಂದರೆ ಆಲೂಗೆಡ್ಡೆ ಎಂಬ ಹೆಸರು ಇತ್ತು. ಆದರೆ, ಇಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಯುವ ರೈತರ ಸಂಖ್ಯೆ ಕಡಿಮೆಯಾಗಿದೆ. ರೈತರಿಗೆ ಆಡಳಿತಾತ್ಮಕ, ಭಾವನಾತ್ಮಕ ತಾಂತ್ರಿಕವಾಗಿ ವರ್ತಕರೇ ಸಹಾಯ ಮಾಡುವ ಜೊತೆಗೆ ಗುಣಮಟ್ಟದ ಬೀಜಗಳನ್ನು ರೈತರಿಗೆ ನೀಡುವ ಮೂಲಕ ಜೀವನವನ್ನು ಸುಧಾರಿಸುವ ಭರವಸೆಯನ್ನು ನೀಡಬೇಕೆಂದು ಹೇಳಿದರು.

» ನಾಲ್ಕನೇ ಪುಟದಲ್ಲಿ

**ಸಭೆಯಲ್ಲಿ ವ್ಯಕ್ತವಾದ ಸಲಹೆಗಳು**

- ಹೋಬಳಿಗೆ ಒಂದರಂತೆ ಖರೀದಿ ಕೇಂದ್ರ ತೆರೆಯಬೇಕು
- ದೃಢೀಕೃತ ಬಿತ್ತನೆ ಬೀಜವನ್ನೇ ವಿತರಣೆ ಮಾಡಬೇಕು
- ಸಹಾಯಧನ ನೀಡಬೇಕು
- ಔಷಧಿ ಸಿಂಪಡಣೆಗೆ ಡ್ರೋಣ್ ವ್ಯವಸ್ಥೆ ಕಲ್ಪಿಸಿ
- ಬಿತ್ತನೆ, ಕಟ್ಟಾವಿಗೆ ಯಂತ್ರೋಪಕರಣ ಒದಗಿಸಿ.
- ಬಿತ್ತನೆ ಬೀಜದ ಕೃತಕ ಅಭಾವ ಸೃಷ್ಟಿಯಾಗಬಾರದು.

## ಮಾರ್ಚ್ 1 ರಂದು ರೇಣುಕಾಚಾರ್ಯ ಜಯಂತಿ

• ಪ್ರಜೋದಯ ವರದಿ

**ಹಾಸನ:** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮಾ.1ರ ಸೋಮವಾರ ಜಗದ್ಗುರು ರೇಣುಕಾ ಚಾರ್ಯ ಅವರ ಜಯಂತಿ ಹಮ್ಮಿಕೊಂಡಿದ್ದು, ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಪೂರ್ವಭಾವಿ ಸಭೆ ನಡೆಸಲಾಯಿತು.

ಅಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಿಂದ ಹಾಸನಾಂಬ ಕಲಾಕ್ಷೇತ್ರದವರೆಗೆ ಶ್ರೀ ರೇಣುಕಾಚಾರ್ಯರ ಬೆಳ್ಳಿ ರಥದ ಭವ್ಯ ಮೆರವಣಿಗೆ ಹೊರಡಲಿದೆ. ಯಸಳೂರು ತೆಂಕಲಗೂಡು ಮಠದ ಮಠಾಧೀಶ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸುವರು. ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಸಿಇಓ ಬಿ.ಆರ್. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ, ಅಧಿಕಾರಿಗಳು ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯ ಸಮುದಾಯದ ಜನರು, ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸುವಂತೆ ಕೋರಲಾಯಿತು.

## ನಗರದ ಪೂರ್ವ ಭಾಗಕ್ಕಷ್ಟೇ ಸೀಮಿತವಾದ ಟ್ರಾಫಿಕ್ ಸಿಬ್ಬಂದಿ | ವಾಹನ ಸಂದಣಿ ಹೆಚ್ಚಿರುವ ಪ್ರದೇಶದತ್ತ ಸುಳಿವಿಲ್ಲ

# ಸಂಚಾರ ದಟ್ಟಣೆ ಬಿಟ್ಟು ವಸೂಲಿಗೆ ಸೀಮಿತವಾದ ಪೊಲೀಸರು

• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ವಾಹನ ಸಂಚಾರ ದಟ್ಟಣೆ ನಿವಾರಣೆ ಮಾಡಬೇಕಿದ್ದ ಸಂಚಾರಿ ಪೊಲೀಸರು ದಂಡ ವಸೂಲಿಗೆ ಮಾತ್ರ ಸೀಮಿತವಾಗಿದ್ದಾರೆ. ಅಮಾಯಕರು, ಸಾಮಾನ್ಯ ಜನರು ಸಂಚರಿಸುವ ಮಾರ್ಗಗಳಲ್ಲಿ ವಸೂಲಿಗಿಳಿಯುವ ಪೊಲೀಸರು, ಟ್ರಾಫಿಕ್ ಕಿರಿಕಿರಿಯಿಂದ ಜನರು ಪರಾದಾಟ ನಡೆಸುತ್ತಿದ್ದರೂ ಗಮನಿಸುವುದಿಲ್ಲ.

ನಗರ ಬೆಳೆಯುತ್ತಿದ್ದಂತೆ ಸಂಚಾರದ ಒತ್ತಡವೂ ಹೆಚ್ಚುತ್ತಿದೆ. ಆದರೆ, ಈ ಸಮಸ್ಯೆಗಳನ್ನು ನಿಯಂತ್ರಿಸುವ ಹೊಣೆ ಹೊತ್ತಿರುವ ಸಂಚಾರಿ ಪೊಲೀಸರು, ಟ್ರಾಫಿಕ್ ನಿರ್ವಹಣೆಗೆ ಬದಲಾಗಿ ದಂಡ ವಸೂಲಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆಂಬ ಆರೋಪಗಳು ಸಾರ್ವಜನಿಕ ವಲಯದಲ್ಲಿ ಹೆಚ್ಚಾಗಿವೆ. ರಸ್ತೆಗಳಲ್ಲಿ ಸಂಚಾರ ಸುಗಮಗೊಳಿಸುವುದಕ್ಕಿಂತ, ಹೆಲ್ಮೆಟ್, ಸೀಟ್ ಬೆಲ್ಟ್, ದಾಖಲೆ ಪರಿಶೀಲನೆ, ಸಣ್ಣ ತಾಂತ್ರಿಕ ದೋಷಗಳ ಹೆಸರಿನಲ್ಲಿ ದಂಡ ವಿಧಿಸುವ ದೃಶ್ಯಗಳು ಸಾಮಾನ್ಯವಾಗಿವೆ.

ನಗರ ಪೂರ್ವ ಭಾಗದ ಎನ್.ಆರ್.ವೃತ್ತ, ಡೇರಿ ವೃತ್ತ, ಎಂ.ಜಿ.ರಸ್ತೆ, ಶಂಕರಮಠ ರಸ್ತೆ, ಆರ್.ಸಿ.ರಸ್ತೆ, ಪಾರ್ಕ್ ರಸ್ತೆಗಳಷ್ಟೇ ಟ್ರಾಫಿಕ್ ಪೊಲೀಸರು ಕಾಣುತ್ತಾರೆಯೇ ವಿನಃ, ಹೆಚ್ಚಿನ ವಾಹನ ದಟ್ಟಣೆ ಇರುವ ನಗರದ ಪಶ್ಚಿಮ ಭಾಗವಾದ ಕಸ್ತೂರಿ ಬಾ ರಸ್ತೆ, ಪೆನ್‌ಷನ್ ಮೊಹಲ್ಲಾ, ಹೊಸಲೈನ್ ರಸ್ತೆ, ಸಂತೆಪೇಟೆ, 80 ಅಡಿ ರಸ್ತೆ, ತಣ್ಣೀರುಹಳ್ಳ, ಸಾಲಗಾಮೆ ರಸ್ತೆಯಲ್ಲಿ ಯಾವೊಬ್ಬ ಟ್ರಾಫಿಕ್ ಪೊಲೀಸರೂ ಕಾಣುವುದಿಲ್ಲ.

ನಗರದಲ್ಲಿ ಟ್ರಾಫಿಕ್ ಪೊಲೀಸರು ಹೆಲ್ಮೆಟ್ ಹಾಕದ ಬೈಕ್ ಸವಾರರಿಗೆ ದಂಡ ಹಾಕಲೆಂದೇ ಇರುವಂತೆ ಕಾಣುತ್ತಿದೆ. ಬಿ.ಎಂ.ರಸ್ತೆಯಿಂದ ಹಿಡಿದು ಶಂಕರಮಠ ರಸ್ತೆಯಾಗಿ ಎಂ.ಜಿ.ರಸ್ತೆ ಮೂಲಕ ರಿಂಗ್ ರಸ್ತೆ ತಲುಪುವವರೆಗೂ ಹಲವು ಕಡೆಗಳಲ್ಲಿ ಬೇಕಾಬಿಟ್ಟಿಯಾಗಿ ವಾಹನಗಳ ಪಾರ್ಕಿಂಗ್ ಮಾಡಿ, ಇತರೆ ವಾಹನ ಸವಾರರಿಗೆ ತೊಂದರೆಯಾಗುವುದನ್ನು ಗಮನಿಸದ ಪೊಲೀಸರು, ಯಾರೋ ಒಬ್ಬ ಅಮಾಯಕ ಹೆಲ್ಮೆಟ್ ಇಲ್ಲದೆ ಈ ಮಾರ್ಗದಲ್ಲಿ ಬಂದರೆ ಸಾಕು ಹೊಂಚು ಹಾಕಿ ಹಿಡಿದು ಹಣ ವಸೂಲಿ ಮಾಡುವ ತನಕ ಬಿಡುವುದಿಲ್ಲ.

**ಆಯಾಕಟ್ಟಿನ ಸ್ಥಳಗಳಲ್ಲಿ ಠಿಕಾಣಿ**

ಗಾಡಿ ಹಿಡಿದ ಪ್ರತಿಯೊಬ್ಬರಿಗೂ ದಂಡ ವಿಧಿಸುತ್ತಿದ್ದಾರೆ. ಮೊದಲು ಡ್ರೈವಿಂಗ್ ಲೈಸೆನ್ಸ್, ವಾಹನ ದಾಖಲೆ ಪರಿಶೀಲಿಸುತ್ತಾರೆ. ಎಲ್ಲಾ ಸರಿ ಇದ್ದರೂ ಹೆಲ್ಮೆಟ್ ಇಲ್ಲದ ಕಾರಣ ನೀಡಿ ದಂಡ ವಿಧಿಸಿಯೇ ತೀರುತ್ತಾರೆ. ಹಳ್ಳಿ ಜನರು ಓಡಾಡುವ ಭಾಗದಲ್ಲೇ ನಿಂತು, ಹೊಂಚು ಹಾಕಿ ಹಿಡಿಯುತ್ತಿದ್ದಾರೆ. ಇಲಾಖೆ ನಿಗದಿ ಮಾಡಿರುವ ಗುರಿಯ ಹಣ ತಲುಪಲು ನಿರಂತರವಾಗಿ ದಂಡ ವಿಧಿಸುತ್ತಿದ್ದಾರೆ. ಸಾರ್ವಜನಿಕರಿಗೆ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ.

ಆಸ್ಪತ್ರೆ, ಪಾರ್ಕ್, ಫುಡ್‌ಕೋರ್ಟ್, ಕಾಲೇಜು ಹೀಗೆ ಸಾಮಾನ್ಯ ಜನರು ಓಡಾಡುವ ರಸ್ತೆಗಳ ಆಯಾಕಟ್ಟಿನ ಸ್ಥಳಗಳಲ್ಲಿ ಮೂರರಿಂದ ನಾಲ್ಕು ಟ್ರಾಫಿಕ್ ಪೊಲೀಸರು ನಿಂತು ಬೈಕ್ ಸವಾರರನ್ನು ಹಿಡಿದು ದಂಡ ವಿಧಿಸುತ್ತಾರೆ. ಆದರೆ, ಹೆಚ್ಚಾಗಿ ವ್ಹೀಲಿಂಗ್ ನಡೆಯುವ 80 ಅಡಿ ರಸ್ತೆ, ಹೆಚ್ಚಿನ ಜನ ಸಂದಣಿ ಇರುವ ಕಸ್ತೂರಿ ಬಾ ರಸ್ತೆ, ಹೊಸಲೈನ್ ರಸ್ತೆ, ತಣ್ಣೀರುಹಳ್ಳ ವೃತ್ತ ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂಬಂತೆ, ಆ ಕಡೆ ತಿರುಗಿ ಕೂಡ ನೋಡುತ್ತಿಲ್ಲವೆಂದು ಜನರು ದೂರಿದ್ದಾರೆ.

**ಜನರಿಗೆ ಅನಗತ್ಯ ತೊಂದರೆ**

ಟ್ರಾಫಿಕ್ ಸಿಗ್ನಲ್‌ಗಳು ಕಾರ್ಯನಿರ್ವಹಿಸದಿದ್ದರೂ, ಸಂಚಾರಿ ಪೊಲೀಸರು ಆ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಬದಲಾಗಿ ರಸ್ತೆ ಬದಿಯಲ್ಲಿ ನಿಂತು ವಾಹನಗಳನ್ನು ತಡೆದು ದಂಡ ವಸೂಲಿ ಮಾಡುವ ಕಾರ್ಯ ಮಾತ್ರ ನಿರಂತರವಾಗಿದೆ. ಇದರಿಂದಾಗಿ ಟ್ರಾಫಿಕ್ ಜಾಮ್ ಹೆಚ್ಚಾಗಿ, ಸಾರ್ವಜನಿಕರಿಗೆ ಅನಗತ್ಯ ತೊಂದರೆ ಉಂಟಾಗುತ್ತಿದೆ. ಸಂಚಾರಿ ಪೊಲೀಸರ ಮೂಲ ಗುರಿ ಅಪಘಾತಗಳನ್ನು ತಡೆಯುವುದು, ಸಂಚಾರವನ್ನು ಸುಗಮಗೊಳಿಸುವುದು. ಆದರೆ, ದಂಡ ವಸೂಲಿಯೇ ಕೇಂದ್ರ ಬಿಂದುವಾಗಿದೆ ಎಂದು ಜನರು ಆಕ್ರೋಶ ಹೊರ ಹಾಕಿದ್ದಾರೆ.



### ಅಗತ್ಯವಿರುವ ಕಡೆ ಪೊಲೀಸರೇ ನಾಪತ್ತೆ

ನಗರದ ಎನ್.ಆರ್.ವೃತ್ತದಿಂದ ಪ್ರಾರಂಭವಾದರೆ ಜಿಲ್ಲಾ ಪಂಚಾಯಿತಿ ಮುಂಭಾಗ, ಜಿಲ್ಲಾಧಿಕಾರಿ ಕಚೇರಿ, ಬಿಎಸ್‌ಎನ್‌ಎಲ್ ಕಚೇರಿ, ರೈಲ್ವೆ ನಿಲ್ದಾಣ, ಡೇರಿ ವೃತ್ತ, ಶಂಕರಮಠ ರಸ್ತೆ, ಬಿ.ಎಂ.ರಸ್ತೆ ಉದ್ದಕ್ಕೂ ಕೈ-ಕಾಲಿಗೆ ಸಿಗುವ ಟ್ರಾಫಿಕ್ ಪೊಲೀಸರು, ಅದೇ ಸಾಲಗಾಮೆ ರಸ್ತೆ, ಕಸ್ತೂರಿ ಬಾ ರಸ್ತೆ, ಹೊಸಲೈನ್ ರಸ್ತೆ, ಸಂತೆಪೇಟೆ ಸೇರಿ ನಗರದಲ್ಲಿ ದಿನವಿಡಿ ಜನಜಂಗುಳಿ, ವಾಹನ ದಟ್ಟಣೆ ಇರುವ ಕಿರಿದಾದ ರಸ್ತೆಯಲ್ಲಿ ಲಾರಿ, ಶಾಲಾ ಬಸ್‌ಗಳು ಸಿಲುಕಿಕೊಂಡು ಜನರು ಪರದಾಟುತ್ತಿದ್ದರೂ ಯಾರೊಬ್ಬರೂ ನೆರವಿಗೆ ಬರುವುದಿಲ್ಲ. ನಗರದಲ್ಲಿ ಅಗತ್ಯವಿರುವ ಕಡೆಗಳಲ್ಲಿ ನಾಪತ್ತೆಯಾಗುವ ಪೊಲೀಸರು, ಅಗತ್ಯವಿಲ್ಲದ ಕಡೆಗಳಲ್ಲಿ ಮೂರರಿಂದ ನಾಲ್ಕು ಪೊಲೀಸರು ಒಂದೆಡೆ ಕುಳಿತು ಮೊಬೈಲ್ ನೋಡಿಕೊಂಡು ಸಮಯ ವ್ಯರ್ಥ ಮಾಡುತ್ತಿರುತ್ತಾರೆ.

## ಸಿಎಂ ಬದಲಾವಣೆ: ಗೊಂದಲ ಸೃಷ್ಟಿಸುವುದಿಲ್ಲ- ಜಿ.ಪರಮೇಶ್ವರ್

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಹುದ್ದೆಗಾಗಿ ನಾನು ಎಲ್ಲಿಯೂ ಬೇಡಿಕೆ ಇಟ್ಟಿಲ್ಲ. ಈ ವಿಚಾರದಲ್ಲಿ ಹೈಕಮಾಂಡ್ ಸೂಕ್ತ ನಿರ್ಧಾರ ಕೈಗೊಳ್ಳುತ್ತದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ನಾನು ಇನ್ಮುಂದೆ ಯಾವುದೇ ಗೊಂದಲ ಸೃಷ್ಟಿಸಲು ಸಿದ್ದನಿಲ್ಲ. ನಮ್ಮ ಹೈಕಮಾಂಡ್ ಸೂಕ್ತ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳುತ್ತದೆ. ನಾನು ಯಾವುದೇ ಲಾಬಿ ಮಾಡುವುದಿಲ್ಲ. ದೆಹಲಿಗೆ ಹೋಗುವ ಕುರಿತು ಯಾರೋ ಕೇಳಿದರು. ನಾನು ದೆಹಲಿಗೆ ಹೋಗಲಿಲ್ಲ ಎಂದರು.

ಮಹತ್ವದ ನಿರ್ಧಾರ ಕೈಗೊಳ್ಳಲು ಹೈಕಮಾಂಡ್‌ಗೆ ಬಿಡಲಾಗಿದೆ. ಹಿತೈಷಿಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಬಹುದಾದರೂ, ಅವರು ಹಾಗೆ ಮಾಡದಂತೆ ತಡೆಯುವುದು ನಾನು ಅವರನ್ನು ನಿರುತ್ಸಾಹಗೊಳಿಸಿ ದಂತಾಗುತ್ತದೆಂದು ಸಮರ್ಥಿಸಿ ಕೊಂಡರು.

# ಕಾಡಾನೆ ಸಮಸ್ಯೆ ನಿವಾರಣೆಗೆ ಪ್ರಯತ್ನ: ಹೆಚ್.ಡಿ.ಕೆ.

## 2021ರ ಅರಣ್ಯ ಇಲಾಖೆ ವರದಿ ಓದುತ್ತಿರುವೆ | ಶೀಘ್ರ ಸಚಿವರೊಂದಿಗೆ ಚರ್ಚಿಸುವೆ

• ಪ್ರಜೋದಯ ವರದಿ

**ಸಕಲೇಶಪುರ:** ಮಲೆನಾಡು ಭಾಗದಲ್ಲಿ ದೀರ್ಘ ಕಾಲದಿಂದ ಜೀವಂತವಾಗಿರುವ ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತೇನೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಭರವಸೆ ನೀಡಿದರು.

ತಾಲ್ಲೂಕಿನ ಕೆರೋಡಿ ಗ್ರಾಮದ ಗೋಪಾಲಸ್ವಾಮಿ ದೇವಸ್ಥಾನದಲ್ಲಿ ನೂತನ ದೇವರುಗಳ ಪ್ರತಿಷ್ಠಾಪನಾ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಗುರುವಾರ ಮಾತನಾಡಿದ ಅವರು, ಕಾಡಾನೆ ಮತ್ತು ಮನುಷ್ಯನ ನಡುವಿನ ಸಂಘರ್ಷ ಈ ಭಾಗದಲ್ಲಿ ಸಾಮಾನ್ಯವಾಗಿದೆ. ಹಲವಾರು ಕುಟುಂಬಗಳಲ್ಲಿ ಸಾವು ಮತ್ತು ನೋವುಗಳಾಗುತ್ತಿದೆ. ಕಾಡಾನೆ ಸಮಸ್ಯೆಯನ್ನು ಬಗೆಹರಿಸುವುಲ್ಲಿ ಸರ್ಕಾರಗಳು ವಿಫಲವಾಗಿದೆ. 2018ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ ಕಾಡಾನೆ ಸಮಸ್ಯೆ ತಡೆಗಟ್ಟಲು ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕಾಗಿ 100 ಕೋಟಿ ರೂ. ನೀಡಿದ್ದೆ. ನಂತರ ಆಡಳಿತ ನಡೆಸಿದವರು ಅಷ್ಟಾಗಿ ಗಮನಹರಿಸದ ಕಾರಣ ಸಮಸ್ಯೆ ಬಗೆಹರಿದಿಲ್ಲವೆಂದರು.



ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ ಸಿಲುಕಿ ಮಹಿಳೆ ಮೃತಪಟ್ಟಿರುವುದು ನೋವಿನ ವಿಚಾರ. ಈ ಹಿನ್ನಲೆಯಲ್ಲಿ ಕೇಂದ್ರದ ಅರಣ್ಯ ಇಲಾಖೆ ಸಚಿವರ ಬಳಿ ಸಮಸ್ಯೆ ಪರಿ ಹರಿಸುವ ಕುರಿತು ಚರ್ಚೆ ಮಾಡಿದ್ದೇನೆ. 2021ರಲ್ಲಿ ಅರಣ್ಯ ಇಲಾಖೆಯವರು ಕಾಡಾನೆ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ವರದಿ ನೀಡಿದ್ದಾರೆ. ಯಾವ ರೀತಿ ಕಾಡಾನೆ ಸಮಸ್ಯೆಯಿಂದ ಮುಕ್ತಿ ಹೊಂದುವುದು ಎಂಬ ನಿಟ್ಟಿನಲ್ಲಿ ವರದಿ ಓದುತ್ತಿದ್ದೇನೆ. ಪ್ರತಿಯೊಬ್ಬರು ನೆಮ್ಮದಿಯಾಗಿ ಬದುಕಬೇಕೆಂದರು.

ಈ ಭಾಗವು ಮುಳುಗಡೆ ಪ್ರದೇಶವಾಗಿದ್ದರೂ ಪರಿಹಾರ ಕೊಟ್ಟಿಲ್ಲವೆಂದು ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್ ಹೇಳಿದ್ದಾರೆ. ಮುಂದಿನ

**ಆನ್‌ಲೈನ್ ಹರಾಜಿಗೆ ಶೀಘ್ರ ಇತಿಶ್ರೀ**

ಬ್ಯಾಂಕ್‌ನಲ್ಲಿ ಸಾಲ ಪಡೆದಿರುವ ಕಾಫಿ ಬೆಳೆಗಾರರ ತೋಟಗಳನ್ನು ಆನ್‌ಲೈನ್ ಮೂಲಕ ಹರಾಜು ಹಾಕುವ ಸರ್ಫೇಸಿ ಕಾಯ್ದೆ ವಾಪಾಸ್‌ಗೆ ಸಂಬಂಧಿಸಿ ಕೇಂದ್ರ ಸರ್ಕಾರದ ಜೊತೆ ಚರ್ಚಿಸಲಾಗಿದ್ದು ಶೀಘ್ರದಲ್ಲಿ ರದ್ದಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚುನಾವಣೆಯಲ್ಲಿ ನನಗೆ ಮೈತ್ರಿ ಸರ್ಕಾರ ಬರುವ ವಿಶ್ವಾಸವಿದ್ದು ಆ ಸಂಧರ್ಭದಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಗಮನಿಸಿ ಯಾರಿಗೆ ಪರಿಹಾರ ಸಿಕ್ಕಿಲ್ಲವೊ ಅವರಿಗೆ ಪರಿಹಾರ ಕೊಡಿಸುವ ಯತ್ನ ಮಾಡುತ್ತೇನೆಂದರು.

ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್, ತೆಂಕಲಗೋಡು ಮಠದ ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ದೇವಸ್ಥಾನ ಸಮಿತಿ ಅಧ್ಯಕ್ಷ ಕೆ.ಕೆ.ಕೆಂಚೇಗೌಡ, ದೇವಸ್ಥಾನದ ಕಾರ್ಯದರ್ಶಿ ಯೋಗೇಶ್, ಕೆ.ಎ.ಪ್ರಸನ್ನ, ಕೆ.ಎನ್.ಮೂರ್ತಿ ಗೌಡ, ಎಂ.ಕೆ.ಮಲ್ಲೇಶ್ ಇತರರಿದ್ದರು.

## ತಂಬಾಕು ಬೆಲೆ ಹೆಚ್ಚಿಸಲು ಸಚಿವರೊಂದಿಗೆ ಚರ್ಚೆ : ಹೆಚ್.ಡಿ.ಕೆ.ಭರವಸೆ

» ಮೊದಲನೇ ಪುಟದಿಂದ

ಲೋಚನೆ ನಡೆಸಿ ನಿರೀಕ್ಷಿತ ಬೆಲೆ ಕಲ್ಪಿಸಲಾಗುವುದು. ಯಾವುದೇ ರೀತಿಯಲ್ಲೂ ಆತಂಕಪಡಬಾರದೆಂದು ಹೇಳಿದರು.

ತಂಬಾಕು ಬೆಳೆಗಾರರನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ಕಳೆದ 20 ರಿಂದ 30 ವರ್ಷಗಳಿಂದ ತಂಬಾಕು ಬೆಳೆಗಾರರ ಪರವಾಗಿ ದೆಹಲಿ ಮಟ್ಟದಲ್ಲಿ ಧ್ವನಿ ಎತ್ತುತ್ತಿದ್ದವರು ಮಾಜಿ ಪ್ರಧಾನಿ ದೇವೇಗೌಡರು. ಈ ವಿಷಯವೆಲ್ಲವೂ ನನ್ನ ಅರಿವಿನಲ್ಲಿದೆ. ನಾಲ್ಕು-ಐದು ದಿನಗಳ ಕಾಲಾವಕಾಶ ನೀಡಿ, ಬೆಲೆ ತಾರತಮ್ಯವನ್ನು ಸರಿಪಡಿಸುತ್ತೇನೆಂದು ತಿಳಿಸಿದರು.

ಈಗಾಗಲೇ ರಾಜ್ಯದ ರೈತರ ಅಪಾರ ಬೆಂಬಲ ದೇವೇಗೌಡರು ಕಟ್ಟಿದ ಜೆಡಿಎಸ್ ಪಕ್ಷಕ್ಕೆ ದೊರೆಯುತ್ತಿದೆ. ಇತ್ತೀಚೆಗೆ ಹಾಸನದಲ್ಲಿ ನಡೆದ ಜೆಡಿಎಸ್‌ನ 25ನೇ ವರ್ಷದ ಸಂಭ್ರಮಾಚರಣೆಯಲ್ಲಿ ಲಕ್ಷಾಂತರ ಕಾರ್ಯಕರ್ತರು ಮತ್ತು ಅಭಿಮಾನಿಗಳು ಭಾಗವಹಿಸಿ ಇಡೀ ರಾಜ್ಯಕ್ಕೆ ದೊಡ್ಡ ರಾಜಕೀಯ ಸಂದೇಶ ನೀಡಿದ್ದಾರೆ. ರಾಜ್ಯದ ಇತರೆ ಕಡೆಗಳಲ್ಲಿಯೂ ಕಾರ್ಯಕ್ರಮಗಳನ್ನು ಆಯೋಜಿಸಿ ಪಕ್ಷದ ಬಲವರ್ಧನೆಗೆ ಬೆಂಬಲ ನೀಡುತ್ತಿದ್ದೀರಿ. ನಾನು ಐದನೇ ಬಾರಿ ಅನಾರೋಗ್ಯಕ್ಕೊಳಗಾದರೂ ಕೂಡ ನಿಮ್ಮ ಆಯುಷ್ಯ, ಪ್ರೀತಿ ಮತ್ತು ಅಭಿಮಾನದಿಂದ ಕೆಲಸ ಮಾಡಲು ಅವಕಾಶ ಕಲ್ಪಿಸಿದ್ದೀರಿ. ದೇವೇಗೌಡರು ಕೂಡ ಕೆಲವೇ ತಿಂಗಳು ಅಧಿಕಾರ ನಡೆಸಿದರು. ಅವರಿಗೆ ಸಂಪೂರ್ಣ ಅಧಿಕಾರ ಸಿಕ್ಕಿದ್ದರೆ ರಾಜ್ಯದ ಚಿತ್ರಣವೇ ಬದಲಾಗುತ್ತಿತ್ತು. ಈಗ ಮತ್ತೊಮ್ಮೆ ದೇವೇಗೌಡರು ಕಟ್ಟಿದ ಪಕ್ಷವನ್ನು ಉಳಿಸುವ ಅಪೂರ್ವ ಅವಕಾಶ ಬಂದಿದೆ. ಒಂದು ಜವಾಬ್ದಾರಿ ನೀಡಲು ನಿಮ್ಮೆಲ್ಲರ ಸಹಕಾರ ಬೇಕಿದೆ ಎಂದು ಮನವಿ ಮಾಡಿದರು.

## ಜಿಲ್ಲೆಯ ಏಳು ಕ್ಷೇತ್ರಗಳಲ್ಲೂ ಜೆಡಿಎಸ್ ಗೆಲ್ಲಿಸಿ ಬಲಪಡಿಸಿ

» ಮೊದಲನೇ ಪುಟದಿಂದ

ತಯಾರಿಸುತ್ತಿದ್ದೇವೆ. ತಯಾರಾದ ಎಲೆಕ್ಟ್ರಿಕ್ ವಾಹನಗಳಲ್ಲಿ ಶೇ.30ರಷ್ಟು ವಿದೇಶಕ್ಕೆ ರಫ್ತು ಮಾಡುತ್ತಿದ್ದೇವೆಂದು ಹೇಳಿದರು.

ನಾವು ಸಣ್ಣ ಮಕ್ಕಳಿದ್ದಾಗ ನಮ್ಮ ಅಜ್ಜಿ ಬೆಳಿಗ್ಗೆ ಮತ್ತು ಸಂಜೆ ದೀಪಕ್ಕೆ ಎಣ್ಣೆ ತೆಗೆದುಕೊಂಡು ದೇವಸ್ಥಾನಕ್ಕೆ ಹೋಗಿ ಸ್ವಚ್ಛ ಮಾಡಿ ದೀಪ ಹಚ್ಚುತ್ತಿದ್ದರು. ಆ ಪರಿಸ್ಥಿತಿ ಈಗ ಹಳ್ಳಿಗಳಲ್ಲಿ ಕಡಿಮೆಯಾಗುತ್ತಿದೆ. ಅತ್ಯುತ್ತಮವಾಗಿ ದೇವಾಲಯಗಳು ನಿರ್ಮಾಣಗೊಳ್ಳುತ್ತಿವೆ. ಅದೇ ನಿಟ್ಟಿನಲ್ಲಿ ಸರ್ವರನ್ನು ಒಳಗೊಂಡಂತೆ ಸಾಮರಸ್ಯ ಮೂಡಿದರೇ ದೇವಸ್ಥಾನಗಳ ನಿರ್ಮಾಣದ ಸಾರ್ಥಕತೆ ಕಾಣಬಹುದಾಗಿದೆ ಎಂದು ಕಿವಿಮಾತು ಹೇಳಿದರು.

ಮಾಜಿ ಸಚಿವ ಎ.ಮಂಜು ಅವರು ಮಾತನಾಡಿದರು. ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಹೊನ್ನವಳ್ಳಿ ಸತೀಶ್, ನರಸೇಗೌಡ, ಚೌಡೇಗೌಡ, ದಿವಾಕರ್, ಅಶೋಕ್, ವಿಜಯ ಕುಮಾರ್, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮುನ್ನಾ ಕೊಡಕಹಳ್ಳಿ ಗ್ರಾಮಕ್ಕೆ ಆಗಮಿಸಿದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಕ್ರೇನ್ ಮೂಲಕ ಹಾರ ಹಾಕಿ,ಪಟಾಕಿಸಿಡಿಸಿ ಸ್ವಾಗತಿಸಲಾಯಿತು. ನೂರಾರು ಮಂದಿ ಮಹಿಳೆಯರು ಆರತಿ ಬೆಳಗಿದರು.

## ಹಳೇಬೀಡು ಪೊಲೀಸರಿಂದ 18 ಜೀತ ಕಾರ್ಮಿಕರ ರಕ್ಷಣೆ

» ಮೊದಲನೇ ಪುಟದಿಂದ

ಪೊಲೀಸರು ಎಲ್ಲರನ್ನೂ ಹಾಸನದ ಅಂಬೇಡ್ಕರ್ ಭವನಕ್ಕೆ ಕರೆತಂದು ಉಪಚರಿಸಿದರು. ಆರೋಗ್ಯ ತಪಾ ಸಣೆ ಬಳಿಕ ಎಲ್ಲರಿಗೂ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ಜೀತ ಕಾರ್ಮಿಕರ ವಿಳಾಸ ಪಡೆದು ಅವರವರ ಊರಿಗೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ಜಿಲ್ಲಾಡಳಿತದಿಂದ ಮಾಡಲಾಗುತ್ತಿದೆ.

**ರಂಜಾನ್ ಹಬ್ಬಕ್ಕೂ ಕಳುಹಿಸಲಿಲ್ಲ**

ಜೀತ ಕಾರ್ಮಿಕರೊಬ್ಬರು ಮಾತನಾಡಿ, ಲಾರಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದೆ. ಉತ್ತಮ ಸಂಬಳ ಕೊಡಿಸುತ್ತೇನೆಂದು ಇಲ್ಲಿಗೆ ಕರೆತಂದು ಬಿಟ್ಟಿದ್ದಾರೆ. ನಾನು ಮುಸಲ್ಮಾನನಾಗಿದ್ದು ರಂಜಾನ್ ಹಬ್ಬಕ್ಕೆ ಹೋಗ್ತಿನಿ ಎಂದರೂ ಬಿಡಲಿಲ್ಲವೆಂದು ಅಳಲು ತೋಡಿಕೊಂಡರು.

ನಮಗೆ ಸರಿಯಾಗಿ ಊಟ, ಉಪಹಾರ ನೀಡುತ್ತಿರಲಿಲ್ಲ. ಮಾಡಿದ ಕೆಲಸಕ್ಕೆ ಸೂಕ್ತ ವೇತನ ಸಹ ಕೊಡುತ್ತಿರಲಿಲ್ಲ. ಹಿಂಸೆ ತಾಳಲಾರದೆ ಕೆಲವರು ಹೇಗೋ ತಪ್ಪಿಸಿಕೊಂಡು ಹೋಗಿದ್ದಾರೆ. ಇನ್ನು ಓಡಲೆತ್ನಿಸಿದ ಹಲವರು ಸಿಕ್ಕಿಬಿದ್ದು, ಹೊಡೆತ ತಿಂದಿದ್ದಾರೆಂದು ಭಾವುಕರಾದರು. ಸೆರೆ ಸಿಕ್ಕ ಕಾರ್ಮಿಕರಲ್ಲಿ ಹೊರ ರಾಜ್ಯ ಹಾಗು ಜಿಲ್ಲೆಯವರೇ ಬಹುತೇಕರಿದ್ದಾರೆ.



**ಚೆನ್ನೈ: ಸತತ 2ನೇ ಟಿ-20 ವಿಶ್ವಕಪ್ ಮೇಲೆ ಕಣ್ಣಿಟ್ಟಿರುವ ಭಾರತ ತಂಡವು ಜಿಂಬಾಬ್ವೆಗೆ 257 ರನ್‌ಗಳ ಕಠಿಣ ಗೆಲುವಿನ ಗುರಿ ನೀಡಿದೆ. ಇಲ್ಲಿನ ಚೆಪಾಕ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಜಿಂಬಾಬ್ವೆ ಬೌಲಿಂಗ್ ಆಯ್ಕೆ ಮಾಡಿಕೊಂಡು ಭಾರತಕ್ಕೆ ಮೊದಲು ಬ್ಯಾಂಟಿಗ್ ಮಾಡಲು ಆಹ್ವಾನಿಸಿತು. ಭಾರತ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 256 ರನ್ ಪೇರಿಸಿದೆ. ಹಾರ್ದಿಕ್ ಪಾಂಡ್ಯ 50 ಅಭಿಷೇಕ್ ಶರ್ಮಾ 55 ರನ್ ಹೊಡೆದು ಗಮನ ಸೆಳೆದರು.**

## ಎನ್‌ಸಿಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಸುನೇತ್ರಾ ಪವಾರ್



• ಪ್ರಜೋದಯ ವರದಿ

**ಮುಂಬೈ:** ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಸುನೇತ್ರಾ ಪವಾರ್ ಅವರು ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎನ್‌ಸಿಪಿಯ ರಾಷ್ಟ್ರೀಯ ಅಧ್ಯಕ್ಷರಾಗಿ ಫೆ.26ರಂದು ಸುನೇತ್ರಾ ಪವಾರ್ ಪ್ರಮಾಣ. ಜ.28ರಂದು ನಡೆದ ವಿಮಾನ ಅಪಘಾತದಲ್ಲಿ ಅಜಿತ್ ಪವಾರ್ ಮೃತಪಟ್ಟ ಬಳಿಕ ಆ ಸ್ಥಾನಕ್ಕೆ ಅವರ ಪತ್ನಿ 62 ವರ್ಷದ ಸುನೇತ್ರಾ ಅವರನ್ನು ಆಯ್ಕೆ ಮಾಡಲಾಗಿದೆ.

ಮುಂಬೈನಲ್ಲಿ ನಡೆದ ಎನ್‌ಸಿಪಿ ಸಭೆಯಲ್ಲಿ ಸುನೇತ್ರಾ ಅವರನ್ನು ಆಯ್ಕೆ ಮಾಡಲಾಗಿದೆ. ಪಕ್ಷದ ಕಾರ್ಯಾಧ್ಯಕ್ಷ ಪ್ರಫುಲ್ ಪಟೇಲ್ ಅವರು ಸುನೇತ್ರಾ ಹೆಸರನ್ನು ಸೂಚಿಸಿದರು. ಹಾಜರಿದ್ದ ಸದಸ್ಯರೆಲ್ಲರೂ ಅನುಮೋದನೆ ನೀಡಿದರು. ಸುನೇತ್ರಾ ಅವಿರೋಧವಾಗಿ ಆಯ್ಕೆಯಾದರು.

## ಹರಿಣಗಳ ಎದುರು ಸೋತ ವೆಸ್ಟ್ ವಿಂಡೀಸ್

### ಭಾರತದ ಸೆಮಿಫೈನಲ್ ಹಾದಿ ಸುಗಮ

• ಪ್ರಜೋದಯ ವರದಿ

**ಅಹಮದಾಬಾದ್:** ಟಿ-20 ವಿಶ್ವಕಪ್ ಸೂಪರ್ ಎಂಟರ ಹಂತದ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ದಕ್ಷಿಣ ಆಫ್ರಿಕಾ 9 ವಿಕೆಟ್‌ಗಳಿಂದ ಸೋಲಿಸಿತು.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಬೌಲಿಂಗ್ ಆಯ್ಕೆ ಮಾಡಿಕೊಂಡು ವಿಂಡೀಸ್ ಅನ್ನು ನಿಗದಿತ 20 ಓವರ್‌ನಲ್ಲಿ 176 ರನ್‌ಗಳಿಗೆ ಕಟ್ಟಿಹಾಕಿತು. ನಂತರ ಬ್ಯಾಟ್ ಮಾಡಿದ ಆಫ್ರಿಕಾ 1 ವಿಕೆಟ್ ಕಳೆದುಕೊಂಡು 29 ಬಾಲ್‌ಗಳು ಬಾಕಿ ಇರುವಂತೆ ಭರ್ಜರಿ ಗೆಲುವು ದಾಖಲಿಸಿತು. ಈ ಫಲಿಂತಾಂಶದ ಮೂಲಕ ಭಾರತದ ಸೆಮಿಫೈನಲ್ ಹಾದಿ ಸುಗಮವಾದಂತಾಗಿದೆ.

ಭಾರತ, ವೆಸ್ಟ್ ಇಂಡೀಸ್ ಹಾಗೂ ಜಿಂಬಾಬ್ವೆ ತಂಡಗಳನ್ನು ಮಣಿಸಿದರೆ ಸೆಮಿಫೈನಲ್ ಹಾದಿ ಸುಗಮವಾಗಲಿದೆ. ರನ್‌ರೇಟ್ ಇಲ್ಲದೆ ಈ ಎರಡು ಪಂದ್ಯಗಳನ್ನು ಭಾರತ ಗೆದ್ದರೆ ಸಾಕು ಸೆಮಿಫೈನಲ್‌ಗೆ ಹೋಗಲಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಆರಂಭಿಸಿದ ವೆಸ್ಟ್ ಇಂಡೀಸ್ ತಂಡಕ್ಕೆ ಆರಂಭಿಕ ಆಘಾತ ಎದುರಾಯಿತು. ಆರಂಭದಲ್ಲಿ



ಯಾವೊಬ್ಬ ಬ್ಯಾಟರ್ ಕೂಡ ಕ್ರೀಸ್ ಕಚ್ಚಿ ಆಡಲಿಲ್ಲ. ಅಗ್ರ ಕ್ರಮಾಂಕದ ಬ್ಯಾಟರ್‌ಗಳ ನೀರಸ ಪ್ರದರ್ಶನದಿಂದಾಗಿ ವಿಂಡೀಸ್ ತಂಡ ಒಂದು ಹಂತದಲ್ಲಿ 7 ವಿಕೆಟ್ ಕಳೆದುಕೊಂಡು 84 ರನ್ ಕಲೆಹಾಕಿತ್ತು. ಆದರೆ, ಕೆಳ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದ ರೊಮಾರಿಯೊ ಶೆಫರ್ಡ್ ಹಾಗೂ ಜೇಸನ್ ಹೋಲ್ಡರ್ ಜೋಡಿಯು ದಕ್ಷಿಣ ಆಫ್ರಿಕಾ ಬೌಲರ್‌ಗಳನ್ನು ಕಾಡಿದರು.

8ನೇ ವಿಕೆಟ್‌ಗೆ ಜೊತೆಯಾದ ಈ ಜೋಡಿ 90 ರನ್‌ಗಳ ಜೊತೆಯಾಟ ಆಡಿದರು. ಈ ವೇಳೆ, ಜೇಸನ್ ಹೋಲ್ಡರ್ (49 ರನ್, 31 ಎಸೆತ, 4 ಬೌಂಡರಿ, 3 ಸಿಕ್ಸರ್) ಹಾಗೂ ರೊಮಾರಿಯೊ ಶೆಫರ್ಡ್ (ಅಜೇಯ 52 ರನ್, 37 ಎಸೆತ, 3 ಬೌಂಡರಿ, 4 ಸಿಕ್ಸರ್) ಕಲೆಹಾಕುವ ಮೂಲಕ ದಕ್ಷಿಣ ಆಫ್ರಿಕಾ ಗೆಲುವಿಗೆ 177 ರನ್ ಗುರಿ ನೀಡಿದರು.

ಬ್ಯಾಟಿಂಗ್ ಆರಂಭಿಸಿದ ದ. ಆಫ್ರಿಕಾ ಕೇವಲ ಒಂದು ವಿಕೆಟ್ ಕಳೆದುಕೊಂಡು 16.1 ಓವರ್‌ನಲ್ಲಿ ಗೆಲುವಿನ ದಡ ಸೇರಿತು. ಆಫ್ರಿಕಾ ಪರ ನಾಯಕ ಮರ್ಕರಂ 82 ರನ್ ಸಿಡಿಸಿ ಅಜೇಯರಾಗಿ ಉಳಿದರು. ಕ್ವಿಂಟನ್ ಡಿ-ಕಾಕ್ 47 ರನ್ ಬಾರಿಸಿ ಚೇಸ್‌ಗೆ ವಿಕೆಟ್ ಒಪ್ಪಿಸಿದರು. ರಿಕಾಲ್ಟನ್ 54 ರನ್ ಹೊಡೆದರು.

## ಆಲೂಗೆಡ್ಡೆಗೆ ಬೆಂಬಲ ಬೆಲೆ, ವಿಮಾ ಸೌಲಭ್ಯ ಕಲ್ಪಿಸಿ

» ಮೊದಲನೇ ಪುಟದಿಂದ

ಮುಂಗಾರು ಹಂಗಾಮಿನ ಬಿತ್ತನೆಗೆ ಆಲೂಗೆಡ್ಡೆ ಮಾರಾಟ ಮಾಡುವ ಎಲ್ಲಾ ವರ್ತಕರುಗಳು, ಏಜೆನ್ಸಿಗಳು ಕಡ್ಡಾಯವಾಗಿ ನೋಂದಣಿಯಾಗಬೇಕು. ವರ್ತಕರು ಮಾರಾಟ ಮಾಡುವ ಆಲೂಗೆಡ್ಡೆಯನ್ನು ಪಂಜಾಬ್‌ನ ಯಾವ ತಾಕಿನಿಂದ ಖರೀದಿಸಲಾಗಿದೆ, ಯಾವ ಗುಣಮಟ್ಟದ್ದು, ಪರಿಶೀಲನೆಯ ಆಗಿದೆಯೇ, ಇಲ್ಲವೇ ಎಂಬ ಬಗ್ಗೆ ರೈತರಿಗೆ ಮಾಹಿತಿ ನೀಡಬೇಕು. ವರ್ತಕರು ದೃಢೀಕೃತ ಬಿತ್ತನೆ ಬೀಜಗಳನ್ನು ಮಾತ್ರ ಮಾರಾಟ ಮಾಡಬೇಕು, ಖರೀದಿ ಚೀಟಿಯಲ್ಲಿ ಬಿತ್ತನೆಗೆ ಬಳಸುವ ಆಲೂಗೆಡ್ಡೆ ಎಂದು ಕಡ್ಡಾಯವಾಗಿ ನಮೂದು ಮಾಡಿಯೇ ಮಾರಾಟ ಮಾಡಬೇಕೆಂದು ಸೂಚನೆ ನೀಡದರು.

ತೋಟಗಾರಿಕೆ ಇಲಾಖೆ ವತಿಯಿಂದ ರೈತರ ನಿಯೋಗವನ್ನು ರಚಿಸಿ ಮುಂಗಾರು ಹಂಗಾಮಿನ ಬಿತ್ತನೆ ಬೀಜಗಳ ಆಯ್ಕೆ, ಖರೀದಿ, ಸಾಗಣಿಕೆ, ಶೇಖರಣೆ, ಮಾರಾಟ ಈ ಎಲ್ಲಾ ಹಂತಗಳ ಮೇಲ್ವಿಚಾರಣೆಗೆ ಅಧಿಕಾರಿಗಳ ತಂಡಗಳನ್ನು ರಚಿಸಬೇಕು. ಇಲಾಖೆಯಿಂದ ಬಿತ್ತನೆ ಮಾಡಲು ಲಭ್ಯವಿರುವ ತಳಿಗಳ ವಿವರ, ಬಿತ್ತನೆ ಬೀಜಗಳನ್ನು ಮಾರಾಟ ಮಾಡಲು ನೋಂದಣಿಯಾಗಿರುವ ವರ್ತಕರ ವಿವರ ಹಾಗು ವರ್ತಕರವಾರು ಲಭ್ಯವಿರುವ ತಳಿಗಳ ವಿವರ, ಆಲೂಗೆಡ್ಡೆ ಬೇಸಾಯದ ವಿವಿಧ ಹಂತಗಳಲ್ಲಿ ಬೆಳೆಗೆ ತಗುಲುವ ರೋಗ ಕೀಟ ನಿಯಂತ್ರಣೆಗೆ ಉಪಯೋಗಿಸಬೇಕಾದ ಸಸ್ಯ ಸಂರಕ್ಷಣಾ ಔಷಧಗಳ ಬಗ್ಗೆ ಮಾಹಿತಿ ನೀಡಿ ಪ್ರಚಾರ ಕೈಗೊಳುವಂತೆ ತಿಳಿಸಿದರು.

ಆಲೂಗೆಡ್ಡೆ ದಾಸ್ತಾನು ಮಾಡಲು ಹೋಬಳಿಗೊಂದು ಶೈತ್ಯಾಗಾರವನ್ನು ಸ್ಥಾಪಿಸಲು ಇಲಾಖೆ ವತಿಯಿಂದ ಪ್ರಸ್ತಾವನೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವುದು. ಆಲೂಗೆಡ್ಡೆ ಬೆಳೆಗೆ ಅವಶ್ಯಕತೆ ಇರುವ ಸಸ್ಯ ಸಂರಕ್ಷಣಾ ಔಷಧಿಗಳನ್ನು ಉಚಿತವಾಗಿ ರೈತರಿಗೆ ಬಿತ್ತನೆ ಬೀಜ ಖರೀದಿಸುವ ಸಮಯದಲ್ಲೇ ವಿತರಿಸಲು ತೋತಗಾರಿಕೆ ಇಲಾಖೆ ವತಿಯಿಂದ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ಬಿತ್ತನೆ ಬೀಜಗಳನ್ನು ಖರೀದಿಸುವಾಗಲೇ ಬೆಳೆ ವಿಮೆ ಮಾಡಿಸಲು ಇಲಾಖೆ ವತಿಯಿಂದ ಅಗತ್ಯ ಕ್ರಮ ಕೈಗೊಳ್ಳಬೇಕು ಹಾಗೂ ಆಲೂಗಡ್ಡೆ ಬೆಳೆಗೆ ಬೆಂಬಲ ಬೆಲೆ ನಿಗದಿಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಿದ ಅವರು, ಸೋಮನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ಆಲೂಗೆಡ್ಡೆ ಬೀಜೋತ್ಪಾದನೆಗೆ ಸೂಕ್ತ ಕ್ರಮವಹಿಸಬೇಕು. ಸಂಶೋಧನಾ ಕೇಂದ್ರದಲ್ಲಿ ಕೈಗೊಳ್ಳಲಾಗುವ ಚಟುವಟಿಕೆಗಳಿಗ ಬಗ್ಗೆ ರೈತರಿಗೆ ಮಾಹಿತಿ ನೀಡಬೇಕು. ಇದರ ಉಪಯೋಗ ಪಡೆಯುವ ಸಲಹೆಗಳನ್ನು ನೀಡಬೇಕೆಂದು ತಿಳಿಸಿದರು.

ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಯೋಗೇಶ್, ಜಂಟಿ ಕೃಷಿ ನಿರ್ದೇಶಕ ರಮೇಶ್ ಕುಮಾರ್, ಸೋಮನಹಳ್ಳಿ ಕಾವಲು ಸಂಶೋಧನ ಕೇಂದ್ರದ ಮುಖ್ಯಸ್ಥ ನಟರಾಜ್, ಆಲೂಗೆಡ್ಡೆ ಮಾರಾಟಗಾರರು, ರೈತರು ಇದ್ದರು.



## ಡಿ.ಎಸ್.ಕೃಷ್ಣೇಗೌಡರಿಗೆ ಮುಖ್ಯಮಂತ್ರಿ ಪದಕ



• ಪ್ರಜೋದಯ ವರದಿ

**ಹಾಸನ:** ರಾಜ್ಯ ಅಗ್ನಿಶಾಮಕ ಇಲಾಖೆಯಲ್ಲಿ 30 ವರ್ಷಗಳ ಕಾಲ ಸೇವೆ ಸಲ್ಲಿಸುವ ಮೂಲಕ ಮುಖ್ಯಮಂತ್ರಿ ಪದಕಕ್ಕೆ ಡಿ.ಎಸ್.ಕೃಷ್ಣೇಗೌಡ ಅವರು ಭಾಜನರಾಗಿದ್ದಾರೆ.

ಕರ್ತವ್ಯದ ಸಂದರ್ಭದಲ್ಲಿ ತಮ್ಮ ಪ್ರಾಣದ ಹಂಗನ್ನು ತೊರೆದು ಅಗ್ನಿ ಅವಘಡ ಮತ್ತು ವಿಪತ್ತುಗಳಲ್ಲಿ ಕರ್ತವ್ಯ ನಿರ್ವಹಿಸಿ ಸಾರ್ವಜನಿಕರ ಜೀವ, ಆಸ್ತಿ-ಪಾಸ್ತಿ ರಕ್ಷಿಸಿ ಸೇವೆ ಸಲ್ಲಿಸಿರುತ್ತಾರೆ. ಅವರ ಸೇವೆಯನ್ನು ಗುರುತಿಸಿ ಫೆ.24ರಂದು ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪದಕ ನೀಡಿ ಗೌರವಿಸಲಾಯಿತು.

## ವಿಜಯ ಶಾಲೆಯಲ್ಲಿ ಮಕ್ಕಳ ಸಾಹಿತ್ಯೋತ್ಸವ

• ಪ್ರಜೋದಯ ವರದಿ

**ಹಾಸನ:** ನಗರದ ಚಿಕ್ಕಹೊನ್ನೇನಹಳ್ಳಿಯ ವಿಜಯ ಆಂಗ್ಲ ಮಾಧ್ಯಮ ಶಾಲೆಯಿಂದ ಇದೇ ಮೊದಲ ಬಾರಿಗೆ ಮಕ್ಕಳಿಗಾಗಿ ಹಾಸನ ಸಾಹಿತ್ಯೋತ್ಸವ -ಮಕ್ಕಳ ಆವೃತ್ತಿ (ದ ಹಾಸನ್ ಲಿಟರೇಚರ್‌ಫೆಸ್ಟಿವಲ್ ಚಿಲ್ಡ್ರನ್ ಎಡಿಷನ್) ಫೆ.28 ಮತ್ತು ಮಾ.1 ರಂದು ಹಮ್ಮಿಕೊಳ್ಳಲಾಗಿದೆ ಎಂದು ಶಾಲೆಯ ಸಂಸ್ಥಾಪಕ ಮುಖ್ಯಸ್ಥೆ ತಾರಾ ಎಸ್. ಸ್ವಾಮಿ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಪಠ್ಯಪುಸ್ತಕ ಅಧ್ಯಯನದಲ್ಲೇ ತೊಡಗುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಹಾಗು ಚಿಂತನಾ ಲಹರಿ ಬದಲಿಸುವ ಉದ್ದೇಶದಿಂದ ಸಾಹಿತ್ಯೋತ್ಸವ ಹಮ್ಮಿಕೊಳ್ಳಲಾಗಿದೆ ಎಂದರು.

ಲೇಖಕರೊಂದಿಗೆಮಕ್ಕಳ ಸಂವಾದ, ಕಥೆ ಹೇಳುವ ಕಾರ್ಯಕ್ರಮ, ಸೃಜನಾತ್ಮಕ ಬರವಣಿಗೆ ಕಾರ್ಯಾಗಾರ, ವಿದ್ಯಾರ್ಥಿಗಳಿಗೆ ವಿನ್ಯಾಸಗೊಳಿಸಿದ ವೈವಿಧ್ಯಮಯ ಚಟುವಟಿಕೆ ನಡೆಯಲಿವೆ. ಬಾಲ್ಯದಿಂದಲೇ ಓದುವ




ಸಂಸ್ಕೃತಿ ಬೆಳೆಸುವುದು, ಸಾಹಿತ್ಯವನ್ನು ಅರ್ಥಪೂರ್ಣವಾಗಿ ಹಾಗು ಆಸಕ್ತಿದಾಯಕವಾಗಿ ಪರಿಚಯಿಸುವುದು ಕಾರ್ಯಕ್ರಮದ ಉದ್ದೇಶ. ಖ್ಯಾತ ಲೇಖಕ ಗಿರೀಶ್ ರಾವ್ ಹತ್ವಾರ್ (ಜೋಗಿ) ಹಾಗು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆಂದರು.

ಸ್ವಪ್ನ ಬುಕ್ ಹೌಸ್ ವತಿಯಿಂದ 1000ಕ್ಕೂ ಹೆಚ್ಚು ಪುಸ್ತಕ ಒಳಗೊಂಡ ಭವ್ಯ ಪುಸ್ತಕ ಮೇಳ ಏರ್ಪಡಿಸಲಾಗಿದೆ. ವಿದ್ಯಾ ವಾಟಿಕಾದಲ್ಲಿ ಸಾಹಿತ್ಯಾಸಕ್ತರು ಪುಸ್ತಕ ವೀಕ್ಷಿಸಿ, ತಮ್ಮಿಷ್ಟದ ಕೃತಿ ಗಳನ್ನು ಆರಿಸಿಕೊಂಡು ಓದುವ ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳಿಂದಲೇ ನಾಟಕ ಮತ್ತು ಕಥನ ಪ್ರದರ್ಶನ ಆಕರ್ಷಣೆಯಾಗಲಿವೆ. ವಿಲಿಯಂ ಶೇಕ್ಸ್‌ಪಿಯರ್ ಹಾಗು ತೆನಾಲಿ ರಾಮಕೃಷ್ಣ ಸೇರಿ ಅನೇಕ ಸಾಹಿತ್ಯ ಕೃತಿಗಳನ್ನು ವಿದ್ಯಾರ್ಥಿಗಳು ರಂಗಮಂಚಕ್ಕೆ ತರಲಿದ್ದಾರೆಂದರು.

ಶಾಲೆಯ ಆಡಳಿತಾಧಿಕಾರಿ ಡಾ.ಶ್ರೀಲಕ್ಷ್ಮಿ ಅವರು ಮಾತನಾಡಿ, ವಿಶೇಷ ಆಕರ್ಷಣೆಯಾಗಿ ಬಂಡಾಯ ವಾಲ್ ರೂಪಿಸಲಾಗಿದೆ. ನಮ್ಮ ಹೆಮ್ಮೆ, ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರ ಹಾರ್ಟ್ ಲ್ಯಾಂಪ್ ಕೃತಿಯಿಂದ ಪ್ರೇರಿತವಾಗಿ ಈ ವೇದಿಕೆ ಸೃಷ್ಟಿಸಲಾಗಿದೆ. ಹಾರ್ಟ್ ಲ್ಯಾಂಪ್ ಕೃತಿ ಪ್ರತಿರೋಧ, ಅಸ್ತಿತ್ವದ ಗುರುತು, ಅಸಮಾನತೆ ಹಾಗು ಅಂಚಿಗೆ ತಳ್ಳಲ್ಪಟ್ಟವರ ಬದುಕಿನ ಕುರಿತು ಸಾಕಷ್ಟು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಈ ಪ್ರೇರಣೆಯಿಂದ ಹುಟ್ಟಿದ ಬಂಡಾಯ ವಾಲ್ ವಿದ್ಯಾರ್ಥಿಗಳ ಆಲೋಚನೆಗಳು, ಪ್ರಶ್ನೆಗಳು, ಅಸಮ್ಮತಿ ಮತ್ತು ಕನಸುಗಳನ್ನು ಮುಕ್ತವಾಗಿ ವ್ಯಕ್ತಪಡಿಸುವ ವೇದಿಕೆಯಾಗಲಿದೆ ಎಂದರು.

## ಅನ್ಯ ವ್ಯಕ್ತಿಗೆ ಭೂಪರಿಹಾರ: ಸಂತ್ರಸ್ತರ ಪ್ರತಿಭಟನೆ



• ಪ್ರಜೋದಯ ವರದಿ

**ಹಾಸನ:** ಯಗಚಿ ಜಲಾಶಯ ಯೋಜನೆ ಕಾಮಗಾರಿಗೆ ವಶಪಡಿಸಿಕೊಂಡಿದ್ದ ಭೂಮಿಯ ಮೂಲ ವಾರಸುದಾರರಿಗೆ ಪರಿಹಾರ ನೀಡುವ ಬದಲಾಗಿ ಸಂಬಂಧವಿಲ್ಲದ ಮಂಜುನಾಥ ಎಂಬ ವ್ಯಕ್ತಿಗೆ ಪರಿಹಾರದ ಹಣ ಮಂಜೂರು ಮಾಡಿರುವುದನ್ನು ಖಂಡಿಸಿ ಗುರುವಾರ ಜಿಲ್ಲಾಧಿಕಾರಿ ಕಚೇರಿ ಎದುರು ಭೀಮ್ ಆರ್ಮಿ ಕರ್ನಾಟಕ ಏಕತಾ ಮಿಷನ್ ವತಿಯಿಂದ ಕುಟುಂಬಸ್ಥರು ಪ್ರತಿಭಟನೆ ನಡೆಸಿದರು.

ಈ ವೇಳೆ ಸಂಘಟನೆ ಜಿಲ್ಲಾಧ್ಯಕ್ಷ ಪ್ರದೀಪ್ ಮಾತನಾಡಿ, ತಾಲ್ಲೂಕಿನ ಕಟ್ಟಾಯ ಗ್ರಾಮದ ಸರ್ವೆ ನಂ.128/1ಎರಲ್ಲಿ ಯಗಚಿಜಲಾಶಯ ಯೋಜನೆ ಕಾಮಗಾರಿಗಾಗಿ ಪ್ರೇಮ ಎಂಬುವವರ 2 ಎಕರೆ ಜಮೀನು, ಪಿತ್ರಾರ್ಜಿತ ಆಸ್ತಿಯಾಗಿದ್ದು, ಈ ಜಾಗ ವನ್ನು ಯಗಚಿ ಜಲಾಶಯ ಯೋಜನೆಯ ನಾಲೆಗಾಗಿ ವಶಪಡಿಸಿ ಕೊಳ್ಳಲಾಗಿತ್ತು. ಪರಿಹಾರವನ್ನು ಬೇರೆ ವ್ಯಕ್ತಿಗೆ ನೀಡಿದ್ದಾರೆಂದು ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದರು.

ವಿಶೇಷ ಭೂಸ್ವಾಧೀನಾಧಿಕಾರಿ ನಿರ್ಲಕ್ಷ್ಯದಿಂದ ಈ ಲೋಪ ನಡೆದಿದೆ. ಸ್ಥಳಕ್ಕೆ ಭೇಟಿ ನೀಡಿ ಯಾರು ಉಳುಮೆ ಮಾಡುತ್ತಿದ್ದಾರೆಂಬುದನ್ನು ಗಮನಿಸಿ ಬಳಿಕ ಸರಿಯಾದ ಭೂ ಮಾಲೀಕರಿಗೆ ಪರಿಹಾರ ವಿತರಣೆ ಮಾಡಬೇಕಿತ್ತು ಎಂದರು. ಜಿಲ್ಲಾಧಿಕಾರಿ ಮಧ್ಯ ಪ್ರವೇಶಿಸಿ ಬೇರೆಯವರ ಖಾತೆಗೆ ಜಮಾ ಆಗಿರುವ ಪರಿಹಾರದ ಹಣವನ್ನು ಬಡ್ಡಿ ಸಮೇತ ಹಿಂಪಡೆದು ಮೂಲ ವಾರಸುದಾರರಿಗೆ ನೀಡಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ತೆರೆದಿರುವ ನಾಲೆ ಮುಚ್ಚಿ ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುವುದೆಂದು ಎಚ್ಚರಿಸಿದರು.

## ಭವಿಷ್ಯದಲ್ಲಿ ಕೃತಕ ಬುದ್ಧಿಮತ್ತೆಯಿಂದ ಕೃಷಿ ಕ್ರಾಂತಿ

• ಪ್ರಜೋದಯ ವರದಿ

**ಹಾಸನ:** ಬದಲಾದ ತಂತ್ರಜ್ಞಾನ ಯುಗದಲ್ಲಿ ಕೃತಕ ಬುದ್ಧಿಮತ್ತೆ ಕೃಷಿ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ತಾಂತ್ರಿಕತೆಯಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದರು.

ನಗರದ ಆಕಾಶವಾಣಿ ರೆಡಿಯೋ ಕಿಸಾನ್ ದಿವಸದ ಅಂಗವಾಗಿ ಏರ್ಪಡಿಸಿದ್ದ ಕೃತಕ ಬುದ್ಧಿಮತ್ತೆ ಹಾಗೂ ಕೃಷಿ ಅಭಿವೃದ್ಧಿ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಹವಾಮಾನ ಮುನ್ಸೂಚನೆ, ಮಣ್ಣು ಪರೀಕ್ಷೆ, ಬೆಳೆ ಸಂರಕ್ಷಣೆ ಹಾಗೂ ಮಾರುಕಟ್ಟೆ ದರಗಳ ವಿಶ್ಲೇಷಣೆಯಲ್ಲಿ ಕೃತಕ ಬುದ್ಧಿಮತ್ತೆ, ತಂತ್ರಜ್ಞಾನ, ರೈತರ ಕೃಷಿ ಚಟುವಟಿಕೆಗಳು ಹಾಗೂ ರೈತರ ಆದಾಯದ ದ್ವಿಗುಣಕ್ಕೆ ಹೆಚ್ಚು ಸಹಾಯ ಮಾಡುತ್ತದೆ ಎಂದರು.

50ರ ದಶಕದಿಂದಲೂ ಆಕಾಶವಾಣಿ ಕೃಷಿ ಸೇರಿ ಇತರೆ ತಂತ್ರಜ್ಞಾನಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಪರಿಪಾಠ ಬೆಳೆಸಿಕೊಂಡಿದ್ದು ಇದು ಇಂದಿಗೂ ಮುಂದುವರೆದಿರುವುದು




ಮೆಚ್ಚುಗೆಯ ಸಂಗತಿ. ಹಾಸನ ಆಕಾಶವಾಣಿ ಕೃಷಿಕರಿಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಬಗ್ಗೆ ಜಾಗೃತಿ ಮೂಡಿಸುವಂತಹ ವಿಚಾರ ಸಂಕಿರಣ ಏರ್ಪಡಿಸಿರುವುದು ಅತ್ಯಂತ ಸೂಕ್ತವಾಗಿದೆ ಎಂದು ಹೇಳಿದರು.

ವಿಚಾರಗೋಷ್ಠಿಯಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಕೃಷಿ ಅಭಿವೃದ್ಧಿಯ ಸಾಧ್ಯತೆಗಳ ಕುರಿತು ಬೆಂಗಳೂರಿನ ಎ.ಐ. ವಿನ್ಯಾಸಕರಾದ ಎನ್.ಜಿ.ಕಿರಣ್ ಮಾಹಿತಿ ನೀಡಿದರು.

ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರಾದ ಡಾ.ಪಿ.ರಮೇಶ್ ಕುಮಾರ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ.ಎಚ್.ಆರ್. ಯೋಗೇಶ್, ಆಕಾಶವಾಣಿ ಕೇಂದ್ರದ ಕಾರ್ಯ ಕ್ರಮ ಮುಖ್ಯಸ್ಥರಾದ ಸುಜಾತ ಎಫ್ ತಳವಾರ್, ಕಾರ್ಯಕ್ರಮ ನಿರ್ವಹಣಾಧಿಕಾರಿ ಅರಕಲಗೂಡು ವಿ.ಮಧುಸೂದನ್ ಹಾಗೂ ಜಿಲ್ಲೆಯ ವಿವಿಧ ಭಾಗಗಳ ಪ್ರಗತಿಪರ ಕೃಷಿಕರು ಭಾಗವಹಿಸಿದ್ದರು.

## ಅಲ್ಪಸಂಖ್ಯಾತ ಸಮುದಾಯಕ್ಕೆ 15 ಸಾವಿರ ಕೋಟಿ ರೂ. ಮೀಸಲಿಡಿ

• ಪ್ರಜೋದಯ ವರದಿ

**ಹಾಸನ:** ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆ ಭರ್ತಿ ಹಾಗು ಅಲ್ಪಸಂಖ್ಯಾತ ಸಮುದಾಯಗಳ ಅಭಿವೃದ್ಧಿಗೆ 15 ಸಾವಿರ ಕೋಟಿ ರೂ. ಅನುದಾನವನ್ನು ಈ ಬಾರಿಯ ಬಜೆಟ್‌ನಲ್ಲಿ ಮೀಸಲಿಡಬೇಕೆಂದು ಎಸ್‌ಡಿಪಿಐ ರಾಜ್ಯ ಸಂಚಾಲಕ ಅಪ್ಸರ್ ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 17ನೇ ಬಜೆಟ್ ಮಂಡಿಸಲು ತಯಾರಿ ನಡೆಸುತ್ತಿದ್ದಾರೆ. ಹಿಂದುಳಿದ ವರ್ಗದವರ ಪರ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ತಳಸಮುದಾಯಗಳ ಅಭಿವೃದ್ಧಿಗಾಗಿ ವಿಶೇಷ ಆದ್ಯತೆ ನೀಡಬೇಕು. ಹಿಂದೆ ನೀಡಿದ್ದ 134 ಆಶ್ವಾಸನೆಗಳಲ್ಲಿ ಕೇವಲ ಶೇ.6.7 ರಷ್ಟು ಮಾತ್ರ ಅನುಷ್ಠಾನಕ್ಕೆ ಬಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಳೆದ ಬಜೆಟ್‌ನಲ್ಲಿ ನಿಗದಿ ಮಾಡಿದ್ದ ಅನುದಾನ, ಶೇ.55 ರಷ್ಟು ಖರ್ಚಾಗಿದೆ. ವಿವಿಧ ಇಲಾಖೆ ಅನುದಾನ ಶೇ.100 ರಷ್ಟು ಖರ್ಚಾಗಲು ಆದ್ಯತೆ



ನೀಡಬೇಕು. ಎಲ್ಲಾ ಇಲಾಖೆಗಳಲ್ಲೂ ಖಾಲಿ ಇರುವ ಸುಮಾರು 3 ಲಕ್ಷ ಖಾಲಿ ಹುದ್ದೆ ಭರ್ತಿ ಮಾಡಬೇಕೆಂದು ಆಗ್ರಹಿಸಿದರು.

ಎಸ್‌ಡಿಪಿಐ ಸದಸ್ಯ ಇಮ್ರಾನ್ ಖಾನ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಮಿತಿ ಮೀರಿರುವ ಕಾಡಾನೆ ಹಾವಳಿಗೆ ಕಡಿವಾಣ ಹಾಕಿ, ಸಾವು-ನೋವು ತಪ್ಪಿಸಬೇಕು. ಕಾಡಾನೆಗಳ ಸ್ಥಳಾಂತರಿಸಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಹದಗೆಟ್ಟಿರುವ ರಾಜ್ಯ ಹೆದ್ದಾರಿ ಸರಿಪಡಿಸಬೇಕು. ಸರ್ಕಾರಿ ಶಾಲೆಗಳಿಗೆ ಕಾಯಕಲ್ಪ ನೀಡಬೇಕು. ಕಾಲೇಜುಗಳಿಗೆ ಮೂಲ ಸೌಕರ್ಯ ಕಲ್ಪಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಫೈರೋಜ್ ಪಾಷ, ಸಜಿಲ್ ಅಹಮದ್, ಸೈಯದ್ ಫರೀದ್ ಇತರರಿದ್ದರು.

## ವ್ಯವಸಾಯ ಕ್ಷೇತ್ರದಲ್ಲೂ ಮಹಿಳೆ ಛಾಪು ಮೂಡಿಸಲಿ

• ಪ್ರಜೋದಯ ವರದಿ

**ಸಕಲೇಶಪುರ:** ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಗುರುತರ ಸಾಧನೆ ಮಾಡುತ್ತಾ ದೇಶದ ಪ್ರಗತಿಗೆ ಕೊಡುಗೆ ನೀಡುತ್ತಿದ್ದು, ಕೃಷಿಯಲ್ಲೂ ಛಾಪು ಮೂಡಿಸಬೇಕೆಂದು ಶ್ರೀ ಶ್ರೀ ರೂರಲ್ ಡೆವಲ್‌ಪ್ಮೆಂಟ್ ಪ್ರೋಗ್ರಾಂ ಸಂಸ್ಥೆಯ (ಎಸ್‌ಎಸ್‌ಆರ್‌ಡಿಪಿ) ಯೋಜನಾ ಸಂಯೋಜಕಿ ದಿವ್ಯ ಅವರು ಹೇಳಿದರು.

ಎಸ್‌ಎಸ್‌ಆರ್‌ಡಿಪಿ, ಡಿಜಿಟಲ್ ಗ್ರೀನ್ ಸಂಸ್ಥೆ ಮತ್ತು ಐಸಿಸಿ ಆರ್‌ಎಲ್ ಯೋಜನೆ ವತಿಯಿಂದ ಪಟ್ಟಣದಲ್ಲಿ ಗುರುವಾರ ಅಂತಾರಾಷ್ಟ್ರೀಯ ಮಹಿಳಾ ರೈತ ವರ್ಷ ಕಾರ್ಯಕ್ರಮ ಅಂಗವಾಗಿ ಏರ್ಪಡಿಸಿದ್ದ ಎಐ ತಂತ್ರಜ್ಞಾನ ಸಮರ್ಥ ಮಹಿಳೆ, ಸುಸ್ಥಿರ ಕೃಷಿ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ಐಸಿಸಿ ಆರ್‌ಎಲ್ ರೈತ ಮಹಿಳೆಯರಿಗೆ ನೆರವಾಗುವ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದೆ. ಮಣ್ಣಿನ ಫಲವತ್ತತೆ, ನೀರಿನ ನಿರ್ವಹಣೆ, ಜೀವನ ವೈವಿಧ್ಯತೆ, ವಾತಾ



ವರಣ ವೈಪರೀತ್ಯ ಮತ್ತು ಜೀಪನೋಪಾಯ ಅವಕಾಶಗಳ ಬಗ್ಗೆ ತರಬೇತಿ ಮತ್ತು ಪ್ರಾತ್ಯಕ್ಷಿಕೆ ನೀಡು ತ್ತಿದೆ ಎಂದರು. ಈ ಕಾರ್ಯಕ್ರಮಕ್ಕೆ ಹಿಂದೂಸ್ಥಾನ್ ಲಿವರ್ ಸಂಸ್ಥೆ ಮತ್ತು ಜೆ.ಡಿ.ಇ. ಪೀಟ್ಸ್ ಸಂಸ್ಥೆಗಳು ಹಣಕಾಸು ನೆರವು ನೀಡುತ್ತಿವೆ. ಏಡಿಹೆಚ್ ಸಂಸ್ಥೆ ಮುಖ್ಯ ಅನುಷ್ಠಾನ ಸಂಸ್ಥೆಯಾಗಿ ಕೆಲಸ ಮಾಡುತ್ತಿವೆ. ಈ ಯೋಜನೆ ಲಿಂಗ ಸಮಾನತೆಗೆ ಹೆಚ್ಚು ಮಹತ್ವ ನೀಡುತ್ತಿದೆ ಎಂದರು.

ಕೇಂದ್ರ ಕಾಫಿ ಸಂಶೋಧನಾ ಸಂಸ್ಥೆ ಕೀಟ ಶಾಸ್ತ್ರಜ್ಞೆ ಡಾ.ಉಮಾ ಅವರು ಮಾತನಾಡಿ, ಕಾಫಿ ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ ಮತ್ತು ರೋಗ ನಿರ್ವಹಣೆ ಮಾಡುವುದನ್ನು ಅರಿಯ ಬೇಕು. ರಾಸಾಯನಿಕ ಬಳಕೆ ಕಡಿಮೆ ಮಾಡಲು ಲಭ್ಯವಿರುವ ಜೈವಿಕ ಮತ್ತು ಸಾವಯವ ಪದ್ಧತಿ ಬಗ್ಗೆ ಮಾಹಿತಿ ನೀಡಿದರು.

ಪುನಃಶ್ಚೇತನ ಕೃಷಿಯನ್ನು ಸಾಧಿಸಬೇಕಾದರೆ ಮಣ್ಣಿನ ಆರೋಗ್ಯ, ರೋಗ ಮತ್ತು ಕೀಟ ನಿಯಂತ್ರಣಕ್ಕೆ ಸಾವಯವ ಮತ್ತು ಜೈವಿಕ ಕ್ರಮಗಳನ್ನು ಅನುಸರಿಸಬೇಕೆಂದರು.

ಡಾ.ಪ್ರೇಮಲತಾ ಅವರು ಮಾತನಾಡಿ, ಅತಿಯಾದ ರಾಸಾಯನಿಕ ಬಳಕೆ ಮಹಿಳೆಯರ ಆರೋಗ್ಯದ ಮೇಲೆ ಬಹಳ ಪರಿಣಾಮ ಬೀರುತ್ತವೆ. ಹುಟ್ಟುವ ಮಕ್ಕಳಿಗೆ ನರಗಳ ದೌರ್ಬಲ್ಯತೆ ಉಂಟು ಮಾಡುತ್ತವೆ. ಋತುಚಕ್ರದ ಮೇಲೆ ಪರಿಣಾಮ ಬೀರುತ್ತವೆ. ಆದ ಕಾರಣ ರೈತ ಮಹಿಳೆಯರು ರಾಸಾಯನಿಕ ಸಿಂಪಡಣೆ ತೊಡಗಿಸಿಕೊಳ್ಳುವುದು ಕಡಿಮೆ ಮಾಡಬೇಕೆಂದು ತಿಳಿಸಿದರು.

ಡಾ||ಪ್ರತೀಕ್ಷಾ ಅವರು ಮಾತನಾಡಿ, ಮಹಿಳೆಯರನ್ನು ಹೆಚ್ಚಾಗಿ ಕಾಡುವ ಸ್ತನ ಕ್ಯಾನ್ಸರ್, ಗರ್ಭಕೋಶದ ಕ್ಯಾನ್ಸರ್ ಕುರಿತು ಮಾಹಿತಿ ನೀಡಿದರು. ಡಿಜಿಟಲ್ ಗ್ರೀನ್ ಸಂಸ್ಥೆಯ ಭಾಗ್ಯವತಿ ಅವರು ಮಾತನಾಡಿ, ಮೊಬೈಲ್ ಆಧಾರಿತ ಫಾರ್ಮರ್ ಚಾಟ್ ಬಳಸುವ ಮೂಲಕ ತಮ್ಮ ಬೆರಳ ತುದಿಯಲ್ಲಿಯೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಮಾರುಕಟ್ಟೆ ಬೆಲೆ, ವಾತಾವರಣ ಮುನ್ಸೂಚನೆಯನ್ನೂ ತಿಳಿದು ಕೊಳ್ಳುವ ಮೂಲಕ ಉತ್ತಮ ಬೆಲೆ ಸಿಗುವ ಹಾಗೆ ಮಾಡಬಹುದೆಂದರು. ಜಿಲ್ಲಾ ಸಂಪನ್ಮೂಲ ವ್ಯಕ್ತಿ ಕುಮುದಾ ಮಾತನಾಡಿದರು.

## ಮಾ.1ಕ್ಕೆ ಸಕಲೇಶಪುರದಲ್ಲಿ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರದ ಇಮೇಜಿನ್ ಚಿತ್ರಕಲಾ ಶಾಲೆ ಹಾಗು ಹೆಚ್.ಸಿ. ಎಜುಕೇಶನ್ ಟ್ರಸ್ಟ್ ವತಿಯಿಂದ ಮಾ.1 ರಂದು ಪಟ್ಟಣದ ಡಾ. ಬಿ. ಆರ್.ಅಂಬೇಡ್ಕರ್ ಭವನದಲ್ಲಿ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಚಂದ್ರಶೇಖರ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಎಲ್‌ಕೆಜಿಯಿಂದ ಪದವಿ ವರೆಗೆ ಆರು ವಿಭಾಗದಲ್ಲಿ ಸ್ಪರ್ಧೆ ನಡೆಯುತ್ತಿದೆ. ಒಂದೊಂದು ವಿಭಾಗಕ್ಕೆ ಒಂದೊಂದು ಚಿತ್ರ ಬಿಡಿಸುವ ವಿಷಯ ನೀಡಲಾಗಿದೆ. ಅಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರ ವರೆಗೆ ಸ್ಪರ್ಧೆ ನಡೆಯಲಿದೆ. ಈಗಾಗಲೇ 150 ಮಕ್ಕಳು ನೋಂದಣಿ ಮಾಡಿಕೊಂಡಿ ದ್ದಾರೆಂದರು.

ಚಿತ್ರಕಲಾ ಶಿಕ್ಷಕ ಲೋಕೇಶ್ ಮಳಲಿ ಅವರು ಮಾತನಾಡಿ, ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲರಿಗೂ ಪ್ರಮಾಣ ಪತ್ರ ಹಾಗು ನೆನಪಿನ



ಕಾಣಿಕೆ ನೀಡಲಾಗುವುದು. ಜೊತೆಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನೀಡಲಾಗುವುದು. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ 1 ರಿಂದ 7ನೇ ತರಗತಿ ವಿದ್ಯಾರ್ಥಿಗಳು ಯಾವುದಾದರೂ ಬಣ್ಣ ಬಳಸಬಹುದು. ಆದರೆ 8 ರಿಂದ ಪದವಿ ತರಗತಿ ವಿದ್ಯಾರ್ಥಿಗಳು ಜಲವರ್ಣ, ಆಕ್ರಲಿಕ್, ಪೋಸ್ಟರ್ ಕಲರ್, ಆಯಿಲ್ ಪೇಸ್ಟಲ್ ಬಣ್ಣ ಬಳಸಬೇಕೆಂದು ತಿಳಿಸಿದರು.

ಆಸಕ್ತರು ಫೆ.25ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು. ಪ್ರವೇಶ ಶುಲ್ಕ 350 ರೂ. ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ನಂ. 9632382519 ಸಂಪರ್ಕಿಸಬಹುದೆಂದರು. ಸುದ್ದಿಗೋಷ್ಠಿಯಲ್ಲಿ ಸೌಮ್ಯ ಚಂದ್ರಶೇಖರ್, ಚಿತ್ರಕಲಾವಿದ ಮಂಜುನಾಥ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK